ಐಕ್ಯರಂಗ

ಪಾರಪತ್ರಿಕೆ

ಭಾರತಕಮ್ಯೂನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 6 ಸಂಚಿಕೆ 24 ಜೂನ್ 10, 1984 ಬೆಲೆ ಪೈಸೆ. 60

ಭೂಮಿಗೆ ಹಕ್ಕುಪತ್ರ, ಕನಿಷ್ಠ ಕೂಲಿಗಾಗಿ ಒತ್ತಾಯಿಸಲು

ಜೂನ್ 11 ರಂದು ರಾಜ್ಯಾದ್ಯಂತ ಸರಕಾರಿ ಕಚೇರಿಗಳೆದುರು ಪಿಕೆಟಿಂಗ್

ರಾಜ್ಯದಲ್ಲಿ ಲಕ್ಷಾಂತರ ಜನ ಬಡ-ಭೂಹೀನ ರೈತರು ಅರಣ್ಯ ಮತ್ತು ರೆವಿನ್ಯೂ ಬಂಜರು ಮತ್ತು ಕೃಷಿ ಯೋಗ್ಯ ಭೂಮಿಯಲ್ಲಿ ಈಗ್ಗೆ ಹತ್ತಾರು ವರ್ಷಗಳಿಂದಲೂ ಕೃಷಿಗೆ ತೊಡಗಿರುವರಾದರೂ ಆ ಭೂಮಿಗಳಿಗೆ ಇನ್ನೂ ಪಟ್ಟಾ ನೀಡಿಲ್ಲ. ಜನರ ಹೋರಾಟದ ಫಲವಾಗಿ ರಾಜ್ಯದಲ್ಲಿ ಪ್ರಪ್ರಥಮವಾಗಿ ಜನತಾ ಸರಕಾರವು ಆಡಳಿತಕ್ಕೆ ಬಂದಾಗಿನಿಂದಲೂ ಕರ್ನಾಟಕ ಪ್ರಾಂತ ರೈತ ಸಂಘವು ದರಖಾಸ್ತುದಾರರಿಗೆ, ಬಗ್ಗೈರ ಹುಕ್ಕುಂ ಸಾಗುವಳಿದಾರರಿಗೆ ಪಟ್ಟಾ ನೀಡಬೇಕೆಂದು ಒತ್ತಾಯಿಸುತ್ತ ಬಂದಿದ್ದರೂ ಇದುವರೆಗೆ ಅವರಿಗೆ ಸೂಕ್ತ ಪರಿಹಾರ ಸಿಕ್ಕಿಲ್ಲ

ಇತ್ತೀಚೆಗೆ ಒತ್ತುವರಿ ಜಮೀನನ್ನು ಖಾಯಂ ಮಾಡುವುದಾಗಿ ಜನತಾ ಮಂತ್ರಿಮಂಡಳವು ನಿರ್ಣಯಿಸಿದ್ದರೂ ಅದು ನಿರ್ಗತಿಕ ಬಡ ರೈತರಿಗೆ ಅಷ್ಟೊಂದು ಲಾಭದಾಯಕವಾಗಿಲ್ಲ. ದಂಡ ತೆತ್ತು ಪಟ್ಟಾ ಪಡೆಯಲು ಸಾಧ್ಯವಾಗಿಲ್ಲ. ಕೇವಲ ರೆವಿನ್ಯೂ ಒತ್ತುವರಿ ಜಮೀನು ಮಾತ್ರ ಅಲ್ಲ, ಹತ್ತಾರೂ ವರ್ಷಗಳಿಂದಲೂ ಅತಿಕ್ರಮಿಸಿ ಬೇಸಾಯ ಮಾಡುತ್ತಿರುವ ಬಗ್ಗೈರ ಹುಕ್ಕುಂ ಸಾಗುವಳಿದಾರರಿಗೆ, ದರಖಾಸ್ತುದಾರರಿಗೆ ಹಕ್ಕುಪತ್ರ ನೀಡಬೇಕಾಗಿದೆ. ರೆವಿನ್ಯೂ ಮಾತ್ರ ಅಲ್ಲದೆ ಕೃಷಿ ಯೋಗ್ಯ ಅರಣ್ಯ ಭೂಮಿಯಲ್ಲೂ ಸಾಗುವಳಿ ತೊಡಗಿದವರಿಗೆ ಪಟ್ಟಾ ನೀಡಬೇಕು. ಈ ಬಗ್ಗೆ ಸರಕಾರಕ್ಕೆ ಹಲವಾರು ಬಾರಿ ಮನವಿ ಮಾಡಿಕೊಂಡಿದೆ. ಮಂತ್ರಿಮಂಡಳದಲ್ಲಿ ಸೂಕ್ತ ತೀರ್ಮಾನಕ್ಕೆ ಬರುವುದಾಗಿ ಆಶ್ವಾಸನೆ ನೀಡ

[8ನೇ ಪುಟ ನೋಡಿ]

ರಾಜ್ಯಾದ್ಯಂತ ರೈತರ ಚಳುವಳಿ ಯಶಸ್ವಿಯಾಗಲಿ

ನಮ್ಮ ದೇಶದಲ್ಲಿ ಕೆಲ ಕಾಲ ಹೊರತು ಸ್ವಾತಂತ್ರ್ಯ ಬಂದಂದಿನಿಂದ ಆಡಳಿತ ನಡೆಸುತ್ತಿರುವ ಕಾಂಗ್ರೆಸ್ ಸರ್ಕಾರ ಅನುಸರಿಸುತ್ತ ಬಂದಿರುವ ರೈತ ವಿರೋಧಿ ನೀತಿಗಳು, ಕಾರ್ಮಿಕ ವಿರೋಧಿ ನೀತಿಗಳ ಫಲವಾಗಿ ಸಣ್ಣ ರೈತರು ವರ್ಷ ವರ್ಷ ಭೂಮಿಯನ್ನು ಕಳೆದುಕೊಂಡು ಕೃಷಿ ಕೂಲಿಗಾರರಾಗುತ್ತಿದ್ದಾರೆ. ಕೃಷಿ ಕಾರ್ಮಿಕರು ಏರುತ್ತಿರುವ ಬೆಲೆಯಿಂದಾಗಿ ಬಡತನದ ರೇಖೆಯಿಂದ ಕೆಳಗೆ ನೂಕಲ್ಪಡುತ್ತಿದ್ದಾರೆ. ಈ ಜನರನ್ನು ಬಡತನ ರೇಖೆಯಿಂದ ಮೇಲೆತ್ತುವ ಸರ್ಕಾರದ ಯೋಜನೆಗಳು ರೂಪಿಸುವುದರಲ್ಲಿಯೇ ಹದಗೆಟ್ಟು ಕಾರ್ಯರೂಪಕ್ಕೆ ತರುವ ಇಚ್ಛೆಯಿಲ್ಲದೆ ವಿಫಲವಾಗಿದೆ.

ಭೂ ಸುಧಾರಣೆಯನ್ನು ಜಾರಿಗೆ ತರಲು ಪ್ರಗತಿ ಪರವಾದ ಧೋರಣೆ ತಾಳದೆ ಅಸಂಖ್ಯ ಸಂದುಗೊಂದುಗಳನ್ನು ನಿರ್ಮಿಸಿ ಹೆಚ್ಚುವರಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವಲ್ಲಿ, ಹಂಚುವಲ್ಲಿ ಆಮೆ ವೇಗದ ನೀತಿಯನ್ನು ಅನುಸರಿಸಲಾಗುತ್ತಿದೆ. ಈ ಶಾಸನ ಜಾರಿಗೆ ತರಲು ಅಧಿಕಾರಿಗಳು ಭೂನ್ಯಾಯ ಮಂಡಳಿಗಳು ದೊಡ್ಡ ಭೂಮಾಲೀಕರಿಗೆ ಶಾಮೀಲಾಗಿರುವ ಸಮಯದಲ್ಲಿ ಸರ್ಕಾರಿ ಅರಣ್ಯ, ಇತರೆ ಭೂಮಿಯನ್ನು ದೊಡ್ಡ ಭೂ ಮಾಲೀಕರು ರಾಜಾರೋಷವಾಗಿ ಆಕ್ರಮ ಸಾಗುವಳಿ ಮಾಡುತ್ತಿದ್ದಾರೆ. ಇನ್ನೊಂದು ಕಡೆ ಸಣ್ಣ ರೈತರು ಕೃಷಿ ಕಾರ್ಮಿಕರು ಹತ್ತು ಹದಿನೈದು ವರ್ಷಗಳಿಂದ ಸಾಗುವಳಿ ಮಾಡಿ ಅಭಿವೃದ್ಧಿಪಡಿಸಿರುವ ಭೂಮಿಯಿಂದ ಅರಣ್ಯ ಬೆಳೆಸುವ ನೆಪಮಾಡಿ ಸರ್ಕಾರ ಒಕ್ಕಲೆಬ್ಬಿಸುತ್ತಿದೆ. ಅದೇ ರೀತಿಯಲ್ಲಿ ಬೆಂಗಳೂರು ಜಿಲ್ಲೆಯಲ್ಲಿ ನಗರ ಕಾರ್ಪೊರೇಷನ್ ಮಿತಿಯಿಂದ ಹದಿನಾರು ಕಿಲೋ ಮೀಟರ್ ಒಳಗೆ ಹಸಿರುವಲಯ ಪ್ರದೇಶವೆಂದು ಘೋಷಣೆ ಮಾಡಿ ಸಾವಿರಾರು ಜನರನ್ನು ಜನತಾ ಸರ್ಕಾರ ಹೊರ ಹಾಕಲು ಯೋಜನೆ ಮಾಡಿದೆ. ಕಾಂಗ್ರೆಸ್ (ಐ) ಸರ್ಕಾರದ ರೈತ ವಿರೋಧಿ ನೀತಿಯ ವಿರುದ್ಧ ರೈತರು 1980ರಿಂದೀಚೆಗೆ ನಿರಂತರ ಹೋರಾಟ ನಡೆಸಿ ಕಾಂಗ್ರೆಸ್ ಸರ್ಕಾರವನ್ನು ಸೋಲಿಸಿ ವಿರೋಧ ಪಕ್ಷಗಳ ಬೆಂಬಲದಿಂದ ಜನತಾ ಸರ್ಕಾರ ಅಧಿಕಾರಕ್ಕೆ ಬಂದು ಕೆಲವೇ ದಿನಗಳಲ್ಲಿ ಸರ್ಕಾರ ಬಂಜರು ಭೂಮಿಯಲ್ಲಿ ಬೇಸಾಯ ಮಾಡುತ್ತಿರುವ ರೈತರಿಗೆ ಭೂಮಿ ಮಂಜೂರು ಮಾಡುವುದಾಗಿ ಘೋಷಿಸಿತು. ಈ ಘೋಷಣೆ ಜಾರಿಗೆ ತಂದು ಭೂಹೀನರಿಗೆ ಭೂಮಿ ಮಂಜೂರು ಮಾಡುವುದನ್ನು ಬಿಟ್ಟು ಸರ್ಕಾರ ಅವರನ್ನು ಒಕ್ಕಲೆಬ್ಬಿಸುತ್ತಿರುವುದು ಖಂಡನೀಯ ಅಲ್ಲದೆ ಗ್ರಾಮಾಂತರ ಕೃಷಿಕಾರ್ಮಿಕರ ಕನಿಷ್ಠ ಕೂಲಿ ಪ್ರಕಟಿಸಲು ಹಿಂಜರಿಯುತ್ತಿದೆ.

ಈ ಹಿನ್ನೆಲೆಯಲ್ಲಿ ರೈತರ ಬೇಡಿಕೆಗಳ ಈಡೇರಿಕೆಗಾಗಿ ಧರಣಿ ಸತ್ಯಾಗ್ರಹ ನಡೆಸಿ, ಬೇಡಿಕೆಗಳ ಈಡೇರಿಕೆಗಾಗಿ ಜನತಾ ಸರ್ಕಾರವನ್ನು ಒತ್ತಾಯಿಸಬೇಕೆಂದು ಕೇಳಿಕೊಳ್ಳುತ್ತೇವೆ.

(8ನೇ ಪುಟ ನೋಡಿ)

ಸಂಪಾದಕೀಯ

ಪಂಜಾಬಿನಲ್ಲಿ ಉಗ್ರಗಾಮಿಗಳ ಶರಣಾಗತಿ ಭಾರತ ಸೇನೆಯ ಉಗ್ರಕ್ರಮ

ಕಳೆದ ಕೆಲವು ತಿಂಗಳುಗಳಿಂದ ಪಂಜಾಬನ್ನು ಕಗ್ಗೊಲೆಯ ರಣಭೂಮಿಯನ್ನಾಗಿ ಪರಿವರ್ತಿಸಿ, ನಿರಪರಾಧಿ ಜನರನ್ನು ಬಲಿತೆಗೆದುಕೊಂಡು, ಕಾಯಿದೆ, ಕಾನೂನುಗಳನ್ನು ಅಸ್ತವ್ಯಸ್ತಗೊಳಿಸಿ ಸ್ವರ್ಣ ಮಂದಿರದಲ್ಲಿ ಆಶ್ರಯ ಪಡೆದಿದ್ದ ಅಕಾಲಿ ದಳದ ಅಧ್ಯಕ್ಷ ಸಂತ ಹರಚಂದ್‌ಸಿಂಗ್ ಲೋಂಗೋವಾಲ ಶಿರೋಮಣಿ ಗುರುದ್ವಾರ ಪ್ರಬಂಧಕ ಸಮಿತಿಯ ಅಧ್ಯಕ್ಷ ಗುರುಚರಣ್‌ಸಿಂಗ್ ಟೋಹರಾ ಅವರು ಸೇನೆಗೆ ಶರಣಾಗತರಾಗಿದ್ದಾರೆ. ಅವರ ಜೊತೆಯಲ್ಲಿ ಇನ್ನೂ ನೂರಾರು ಉಗ್ರಗಾಮಿಗಳನ್ನು ಸೈನ್ಯ ವಶಪಡಿಸಿಕೊಂಡಿದೆ. ಉಗ್ರವಾದಿಗಳ ನಾಯಕ ಬಿಂದ್ರನ್‌ವಾಲೆ ಸತ್ತಿದ್ದಾರೆ.

ಚಂಡೀಗಡ ಪಂಜಾಬಿಗೆ ಕೊಡಬೇಕೆಂದೂ, ಫಜಿಲ್ಕಾ ಮತ್ತಿ ಕೆಲವು ಪ್ರದೇಶ ಪಂಜಾಬಿಗೆ ಸೇರಿಸಲ್ಪಡಬೇಕೆಂದೂ, ನದಿಗಳ ನೀರಿನ ಪುನರ್ವಿಮರ್ಶೆಯಾಗಬೇಕೆಂಬ ಬೇಡಿಕೆಗಳ ಸಲುವಾಗಿ ಪ್ರಾರಂಭವಾದ ಅಕಾಲಿಗಳ ಚಳುವಳಿ ಕೇಂದ್ರ ಸರಕಾರದ ಅಸಮರ್ಪಕ ನೀತಿಯಿಂದಾಗಿ ಸೀಖ್‌ರಿಗೆ ಪ್ರತ್ಯೇಕ ರಾಜ್ಯ "ಖಲಿಸ್ತಾನ್" ಬೇಡುವ, ಸೀಖ್ಖರು ಹಿಂದೂಗಳಲ್ಲೆಂದು ಸಂವಿಧಾನದಲ್ಲಿ ತಿದ್ದುಪಡಿ ಮಾಡಬೇಕೆಂದು ಒತ್ತಾಯಿಸುವ ಉಗ್ರಗಾಮಿಗಳ ಕೈವಶವಾಯಿತು. ಸಿಖ್ಖರ್ ಹಿಂದುಗಳನ್ನು ದ್ವೇಷಿಸುವಂತಾಯಿತು. ಅಮೇರಿಕನ್ ಸಾಮ್ರಾಜ್ಯಶಾಹಿ ಮತ್ತಿನ್ನಿತರ ವಿದೇಶಿ ಸರಕಾರಗಳ, ಬೆಂಬಲದಿಂದ ಪಂಜಾಬ್, ಹರಿಯಾಣಗಳಲ್ಲಿ ಸಿಖ್ ಉಗ್ರಗಾಮಿಗಳು ಸ್ವರ್ಣಮಂದಿರ ಹಾಗೆಯೇ ಇತರ ಗುರುದ್ವಾರಗಳಲ್ಲಿ ಶಸ್ತ್ರಾಸ್ತ್ರ ಸಂಗ್ರಹಿಸಿ ದರೋಡೆ, ಕೊಲೆ, ಸುಲಿಗೆಗಳಲ್ಲಿ ಮಗ್ನರಾಗಿ ಜನಜೀವನವನ್ನೇ ನಾಶಗೊಳಿಸಿದ್ದಾರೆ.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಹಾಗೆಯೇ ಇತರ ವಿರೋಧಿ ಪಕ್ಷಗಳೆಲ್ಲ ಈ ಸಮಸ್ಯೆಯ ಪರಿಹಾರಕ್ಕೆ ಹಲವಾರು ಸೂಚನೆಗಳನ್ನು ಮಂಡಿಸಿ ಕೇಂದ್ರ ಸರಕಾರ ಅಕಾಲಿಗಳ ಸಮಸ್ಯೆಯನ್ನು ಚರ್ಚೆ ಮೂಲಕ ಸೌಹಾರ್ದಯುತವಾಗಿ ಬಗೆಹರಿಸಬೇಕೆಂದೂ ಇಲ್ಲವಾದರೆ ಛಿದ್ರಕಾರಿ ಶಕ್ತಿಗಳು ದೇಶದ ಸಮಗ್ರತೆಗೆ ಅಪಾಯವನ್ನುಂಟುಮಾಡುವ ಸಾಧ್ಯತೆ ಇದೆಂಬ ಎಚ್ಚರಿಕೆ ನೀಡುತ್ತಾ ಬಂದಿದ್ದರು. ಪಂಜಾಬ-ಹರಿಯಾಣದ ಸಮಸ್ಯೆಗೆ ಇಂದಿರಾಗಾಂಧಿಯವರೇ 1971ರಲ್ಲೇ ಪರಿಹಾರ ಸೂಚಿಸಿದ್ದರು. ಆದರೆ ಅದರಂತೆ ಅವರು ನಡೆಯಲಿಲ್ಲ. ಅಕಾಲಿ ಚಳುವಳಿಗೆ ಅಪ್ರತ್ಯಕ್ಷ ರೀತಿಯಿಂದ ಪ್ರೋತ್ಸಾಹಿಸುವಂತೆ ವರ್ತಿಸಿದರು.

ಪಂಜಾಬಿನಲ್ಲಿ ಚುನಾಯಿಸಲ್ಪಟ್ಟ ತಮ್ಮ ಪಕ್ಷದ ಸರಕಾರವನ್ನೇ ವಿಸರ್ಜಿಸಿ ರಾಷ್ಟ್ರಾಧ್ಯಕ್ಷರ ಆಳ್ವಿಕೆ ತಂದರೂ ಕೂಡ ನಾಗರೀಕ ರಕ್ಷಣೆ ಮಾಡುವಲ್ಲಿ, ಉಗ್ರಗಾಮಿಗಳ ಚಟುವಟಿಕೆಯನ್ನು ನಿಲ್ಲಿಸುವಲ್ಲಿ ಕೇಂದ್ರ ಆಡಳಿತ ವಿಫಲಗೊಂಡಿತ್ತು. ಪರಿಸ್ಥಿತಿ ಕೈ ಮೀರಿ ಹೋಗುತ್ತದೆಂದು ತಿಳಿದೇ ಸೈನ್ಯ ಕರೆಸಬೇಕಾಯಿತು.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ, ಪ. ಬಂಗಾಳದ ಮುಖ್ಯಮಂತ್ರಿ ಜ್ಯೋತಿಬಸು ಮೊದಲಾದವರು ಕೇಂದ್ರ ಸರಕಾರದ ಈ ಕ್ರಮವನ್ನು ಸ್ವಾಗತಿಸಿ, ಅಕಾಲಿಗಳು ಉಗ್ರಗಾಮಿಗಳ ನೇತೃತ್ವ ಬಿಟ್ಟುಕೊಟ್ಟು ಚರ್ಚೆಗೆ ಬರಬೇಕೆಂದೂ, ಕೇಂದ್ರ ಸರಕಾರ, ಅಕಾಲಿದಳ ಮತ್ತು ವಿರೋಧ ಪಕ್ಷಗಳೆಲ್ಲ ಸೇರಿ ಪಂಜಾಬಿನ ಅಕಾಲಿಗಳ ಸಮಸ್ಯೆಯನ್ನು ಸೌಹಾರ್ದಯುತವಾಗಿ ಬಗೆಹರಿಸಿ, ಉಗ್ರವಾದಿಗಳನ್ನು ಪ್ರತ್ಯೇಕಿಸಿ, ದೇಶದ ಸಮಗ್ರತೆಯನ್ನು ಕಾಪಾಡಲು ಸಹಕರಿಸಬೇಕೆಂದು ಕೇಳಿಕೊಳ್ಳುತ್ತೇವೆ.

ಜೂನ್ 11 ರ ರೈತ - ಕಾರ್ಮಿಕರ ಚಳುವಳಿಗೆ ಜಯವಾಗಲಿ

ಭಾರತ ದರ್ಶನ

ಸರಕಾರದ ಸ್ವರೂಪದಲ್ಲಿ ಬದಲಾವಣೆ ?

ಈ ವರ್ಷದ ಕೊನೆಯಲ್ಲಿ ಲೋಕಸಭೆಯ ಚುನಾವಣೆಯಾಗಬಹುದೆಂಬ ಊಹೆ ಬೆಳೆಯುತ್ತಿರುವಂತೆಯೇ ಜನತಾ ಪಕ್ಷದ ಅಧ್ಯಕ್ಷ ಚಂದ್ರಶೇಖರ್ ಅವರು ಚುನಾವಣೆ ಮುಂದೂಡಲ್ಪಡಬಹುದೆಂದು ಹೇಳಿದ್ದಾರೆ. ಈಗಿನ ಆಳುವ ಪಕ್ಷ 1977ರ ಪುನರಾವರ್ತಿಯನ್ನೆದುರಿಸಲಾರದೆಂದೂ ಅವರ ವಿಚಾರವಾಗಿದೆ.

ಇದು ಸತ್ಯಕ್ಕೆ ಸಮೀಪವಾಗಿರುವಂತೆ ಕಾಣುತ್ತದೆ. ಯಾಕೆಂದರೆ ಚುನಾವಣೆಯನ್ನು ಮುಂದೂಡುವುದಷ್ಟೇ ಅಲ್ಲ. ಈಗಿರುವ ಪಾರ್ಲಿಮೆಂಟರಿ ಪದ್ಧತಿಯು ಬದಲಾಗಿ ಅಧ್ಯಕ್ಷೀಯ ಪದ್ಧತಿಯನ್ನಾಗಿ ಪರಿವರ್ತಿಸಿ ದೇಶದ ರಾಜಕೀಯದಲ್ಲಿಯೇ ಬದಲಾವಣೆಯನ್ನುಂಟುಮಾಡುವ ವಿಚಾರ ಹೊರ ಬೀಳುತ್ತಿದೆ. ದೇಶದಲ್ಲಿರುವ ಸುಮಾರು 550 ಲೋಕಸಭಾ ಮತಕ್ಷೇತ್ರಗಳ ಪೈಕಿ ಪ್ರತಿಯೊಂದು ಮತಕ್ಷೇತ್ರವನ್ನು ಯಾರು ಪ್ರತಿನಿಧೀಕರಿಸುತ್ತಾರೆಂಬ ಪ್ರಶ್ನೆ ಮೂಲೆಗುಂಪಾಗಿ ದೇಶದ ಆಡಳಿತ ನಡೆಸುವವರು ಯಾವ ಅಧ್ಯಕ್ಷ ಅಥವಾ ಪ್ರಧಾನ ಮಂತ್ರಿ ಎಂಬ ವಿಷಯ ಮತದಾರರ ಮುಂದೆ ಎದ್ದು ನಿಂತಿದೆ. ಪ್ರತಿಯೊಂದು ಮತಕ್ಷೇತ್ರದಲ್ಲೂ ತನಗೆ ಬಹುಮತ ಸಿಗುವ ವಿಷಯದಲ್ಲಿ ಕಾಂಗ್ರೆಸ್ ಮುಖಂಡರಿಗೆ ಅನುಮಾನ ಇರಬಹುದು. ಆದರೆ ಯಾರು ಅಧ್ಯಕ್ಷ ಅಥವಾ ಪ್ರಧಾನ ಮಂತ್ರಿಯಾಗಬೇಕೆಂಬುದರ ಕುರಿತು ಬಹುಮತ ಪಡೆಯಬಹುದೆಂಬ ನಂಬಿಕೆ ಅವರಿಗಿದೆ.

ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಕಾನೂನು ವಿಭಾಗವು ಈಗಿರುವ ಸರಕಾರೀ ಪದ್ಧತಿಯಲ್ಲಿ "ಮೂಲಭೂತ" ಬದಲಾವಣೆಯಾಗಬೇಕೆಂಬ ಅಭಿಪ್ರಾಯ ವ್ಯಕ್ತಮಾಡಿದೆ. ಇದಕ್ಕೆ ಪೂರಕವಾಗಿ ಕೇಂದ್ರದ ಅರ್ಥಮಂತ್ರಿಗಳಾದ ಪ್ರಣಬ ಮುಖರ್ಜಿಯವರು, ಪಾರ್ಲಿಮೆಂಟರಿ ಪ್ರಜಾಪ್ರಭುತ್ವದಂಥ ಒಳ್ಳೆಯ ಪದ್ಧತಿ ದೇಶದಲ್ಲಿದ್ದರೂ ಕೂಡ ಅಧ್ಯಕ್ಷೀಯ ಪದ್ಧತಿಯನ್ನು ಅನುಷ್ಠಾನದಲ್ಲಿ ತರುವ ಕುರಿತು ದೇಶಾದ್ಯಂತ ಚರ್ಚೆಗೆ ಅವಕಾಶ ಮಾಡಿಕೊಟ್ಟರೆ ಹಾನಿಯೇನಿಲ್ಲೆಂದೂ, ಪ್ರಜಾಪ್ರಭುತ್ವದ ಮೇಲಿನ ವಿಶ್ವಾಸ ದೇಶದಲ್ಲಿ ಆಳವಾಗಿ ಮಾಡಿರುವಾಗ ಅಧ್ಯಕ್ಷೀಯ ಪದ್ಧತಿಯ ಸರಕಾರದ ಪ್ರಯೋಜನದ ಕುರಿತು, ನಡೆಯುವ ಚರ್ಚೆಯನ್ನು ಯಾರೂ ವಿರೋಧಿಸಲಿಕ್ಕಿಲ್ಲೆಂದು ಹೇಳಿದ್ದಾರೆ.

ನಮ್ಮ ದೇಶದಲ್ಲಿ ಆಡಳಿತಾತ್ಮಕ ಪದ್ಧತಿಯಲ್ಲಿ ಬದಲಾವಣೆ ಮಾಡುವವರಿದ್ದಾರೆಂದು ತಿಳಿದ ಕೂಡಲೇ ಎಲ್ಲ ವಿರೋಧ ಪಕ್ಷಗಳು, ಜನತೆಯೂ ಆ ವಿಚಾರದ ವಿರುದ್ಧ ಅಭಿಪ್ರಾಯ ವ್ಯಕ್ತಮಾಡುತ್ತಿದ್ದಾರೆ. ಸಕಾಲದಲ್ಲಿ ಚುನಾವಣೆಯಾಗಬೇಕೆಂದೂ, ಪ್ರಜಾಪ್ರಭುತ್ವ ವಿರೋಧಿ ನಿಲುವು ಕೈಬಿಡಬೇಕೆಂದೂ ಹೇಳಿ ನಡೆಯುತ್ತಿರುವ ಹೋರಾಟದಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಮುಂಚೂಣಿಯಲ್ಲಿದೆ.

ಪ್ರಜಾಪ್ರಭುತ್ವ - ಎಡ ಶಕ್ತಿಗಳ ಬೆಳವಣಿಗೆ

ಈಗಿರುವ ಪಾರ್ಲಿಮೆಂಟರಿ ಪದ್ಧತಿಯನ್ನು ಬದಲಾವಣೆ ಮಾಡಿ ರಾಷ್ಟ್ರಾಧ್ಯಕ್ಷ ಪದ್ಧತಿಗೆ ಪರಿವರ್ತಿಸಬೇಕೆಂಬ ವಿಚಾರ ಇಂದಿರಾ ಕಾಂಗ್ರೆಸ್ಸಿಗರಲ್ಲಿ ಮೂಡಿ ಬರಲು ಕಾರಣವೇನು ?

ಮಧ್ಯ ಜನೇವರಿಯಲ್ಲಿ ಕಲ್ಕತ್ತದಲ್ಲಿ ಸೇರಿದ್ದ ವಿರೋಧ ಪಕ್ಷಗಳ ಮತ್ತು ಮುಖ್ಯ ಮಂತ್ರಿಗಳ ಸಮಾವೇಶದ ನಿರ್ಣಯದಲ್ಲಿ, ಕಾಂಗ್ರೆಸ್ ಅಧಿಕಾರಕ್ಕೆ ಬಂದು ನಾಲ್ಕು ವರ್ಷಗಳಾದವೆಂದೂ, "ಕ್ರಿಯಾತ್ಮಕ ಸರಕಾರ" ರಚಿಸುತ್ತೇನೆಂದೂ, ಅವಶ್ಯಕ ವಸ್ತುಗಳ ಬೆಲೆ ಇಳಿಸುತ್ತೇನೆಂದೂ, ಜನರ ಆರ್ಥಿಕ ಪರಿಸ್ಥಿತಿ ಸುಧಾರಿಸುತ್ತೇನೆಂದೂ, ರಾಷ್ಟ್ರದ ಐಕ್ಯತೆಗೆ ಮಾರಕವಾದ ಜಾತೀಯತೆ, ಪ್ರತ್ಯೇಕತೆಗಳನ್ನೆಲ್ಲ ತಡೆ ಹಿಡಿಯುತ್ತೇನೆಂದೂ, ಇಂದಿರಾ ಗಾಂಧಿ ಮತದಾರರಿಗೆ ಆಶ್ವಾಸನೆ ನೀಡಿದ್ದರೂ' ಇವು ಯಾವುವೂ ಕೈಗೂಡಿಲ್ಲ ಅಷ್ಟೇ ಅಲ್ಲ ಪರಿಸ್ಥಿತಿ ಇನ್ನೂ ಗಂಭೀರವಾಗುತ್ತ ಹೋಗಿದೆಯೆಂದೂ, ಇದರಿಂದಾಗಿ ಜನರಲ್ಲಿ ಅಸಮಾಧಾನ ಬೆಳೆದು ಹೋರಾಟಗಳು ನಡೆಯುತ್ತಿರುವಾಗ, ಸಮಸ್ಯೆಗಳಿಗೆ ಪರಿಹಾರ ಒದಗಿಸದೆ, ದಬ್ಬಾಳಿಕೆ ನಡೆಸುತ್ತಿದೆಂದೂ, ಎಲ್ಲ ಪ್ರಜಾಪ್ರಭುತ್ವವಾದಿ ಶಕ್ತಿಗಳೂ ಅದರ ವಿರುದ್ಧ ಹೋರಾಟಕ್ಕಿಳಿದಿವೆಂದೂ ಹೇಳಿದೆ.

ಆಳುವ ಪಕ್ಷ ನಡೆಸುತ್ತಿರುವ ದಬ್ಬಾಳಿಕೆ ಜನರ ಹೋರಾಟವನ್ನು ಹತ್ತಿಕ್ಕಲು ಸಾಧ್ಯವಿಲ್ಲ. ಕಲ್ಕತ್ತಾ ಸಮಾವೇಶ ದೇಶಾದ್ಯಂತ ಪ್ರತಿಭಟನೆಗೆ ಕರೆ ಕೊಟ್ಟಿತ್ತು. ಆ ಕರೆಗೆ ಓಗೊಟ್ಟು ಸಮಾವೇಶ, ಪ್ರತಿಭಟನೆ, ಧರಣೆಗಳು ನಡೆದವು. ಕಾಂಗ್ರೆಸ್ಸಿನ ಜನ ವಿರೋಧಿ ನೀತಿಯ ವಿರುದ್ಧ ಪ್ರಚಂಡ ಜನ ಜಾಗೃತಿ ಉಂಟು ಮಾಡಲು ಸಾಧ್ಯವಾಯಿತು.

ಇದರ ಜೊತೆಯಲ್ಲಿಯೇ ಸಾಮ್ರಾಜ್ಯಶಾಹಿಗಳ ಯುದ್ಧಖೋರ ನೀತಿಯ ವಿರುದ್ಧ ವಿರೋಧ ಪಕ್ಷಗಳನ್ನೆಲ್ಲ ಸೇರಿಸಿ ಸಮಾವೇಶ ನಡೆಸಲು ಶಕ್ಯವಾಯಿತು.

ರಾಷ್ಟ್ರೀಯ ಚಳುವಳಿ ಸಮಿತಿಯ ನೇತೃತ್ವದಲ್ಲಿ ಕಾರ್ಮಿಕ ಸಂಘಗಳೆಲ್ಲ ಒಟ್ಟಾಗಿ ಕಾಂಗ್ರೆಸ್ಸಿನ ಕಾರ್ಮಿಕ ವಿರೋಧಿ ನೀತಿಯನ್ನು ಪ್ರತಿಭಟಿಸಿ ದೇಶದ್ಯಂತ ಚಳುವಳಿ ನಡೆಸಿದ್ದಷ್ಟೇ ಅಲ್ಲ. ಮಾರ್ಚ್ 18 ರಂದು ಲಕ್ಷಾವಧಿ ಕಾರ್ಮಿಕರು ಪಾರ್ಲಿಮೆಂಟಿನೆದುರು ಮತ ಪ್ರದರ್ಶನ ಮಾಡಿದರು.

ಇವೆಲ್ಲ ಏನು ತೋರಿಸಿ ಕೊಟ್ಟಿವೆ ? ವಿಜಯವಾಡದಲ್ಲಿ ಸೇರಿದ್ದ ಸಿಪಿಐ (ಎಂ)ನ 11ನೇ ಪಾರ್ಟಿ ಕಾಂಗ್ರೆಸ್ಸಿನಲ್ಲಿ ನಿರ್ಣಯಿಸಲ್ಪಟ್ಟ ಎಡ ಮತ್ತು ಪ್ರಜಾಪ್ರಭುತ್ವ ರಂಗ 23 ಅಂಶಗಳ ಕಾರ್ಯಕ್ರಮ ಸರಿಯಾಗಿದೆಂದು ವಿರೋಧ ಪಕ್ಷಗಳ ಮತ್ತು ಶಾಂತಿಗಾಗಿ ನಡೆದ ಕಾರ್ಯಕ್ರಮಗಳು ತೋರಿಸಿ ಕೊಟ್ಟಿವೆ. ಬಂಡವಾಳಶಾಹಿ ಭೂಮಾಲಕ ವರ್ಗದ ಕಾರ್ಯಕ್ರಮ ಮತ್ತು ನಡವಳಿಕೆಗಳ ಬದಲಾಗಿ, ಒಂದು ರಾಜಕೀಯ ಮತ್ತು ಆರ್ಥಿಕ ಕಾರ್ಯಕ್ರಮ ರೂಪುಗೊಳ್ಳುತ್ತಿದೆಂಬುದನ್ನು' ಎಡ ಹಾಗೂ ಪ್ರಜಾಪ್ರಭುತ್ವ ಶಕ್ತಿಗಳ ಸಂಯುಕ್ತ ಚಳವಳಿ ತೋರಿಸಿ ಕೊಡುತ್ತಿದೆ.

ಈ ಹಿನ್ನೆಲೆಯಲ್ಲಿ ಲೋಕಸಭೆ ಚುನಾವಣೆ ನಡೆಯಬೇಕಾಗಿರುವುದರಿಂದ ಚುನಾವಣೆಯಾದರೆ ತಾವು ಬಹುಮತ ಕಳೆದು ಕೊಳ್ಳುವುದಷ್ಟೇ ಅಲ್ಲ, ಸಿ. ಪಿ. ಐ. [ಎಂ] ಮತ್ತು ಇತರ ಎಡ ಪಕ್ಷಗಳು ಬಲಗೊಳ್ಳುತ್ತವೆಂದು ಆಳುವ ಪಕ್ಷದ ಮುಖಂಡರು ಖಾತ್ರಿ ಮಾಡಿಕೊಂಡಿದ್ದಾರೆ. ಇಂಥ ಭವಿಷ್ಯವನ್ನವರು ಎದುರು ನೋಡುತ್ತಿದ್ದಾರೆ, ಅದನ್ನು ತಪ್ಪಿಸಬೇಕೆಂಬುದೇ ಅವರ ಇಚ್ಛೆ. ಅದಕ್ಕಾಗಿಯೇ ಚುನಾವಣೆ ಮುಂದೂಡುವ, ರಾಷ್ಟ್ರಾಧ್ಯಕ್ಷ ಪದ್ಧತಿಯ ಆಡಳಿತೆಯನ್ನು ಜಾರಿಯಲ್ಲಿ ತರುವ ವಿಚಾರಗಳಿಗೆ ಪ್ರಚಾರ ನೀಡಲಾಗುತ್ತಿದೆ. ಸರ್ವಾಧಿಕಾರಕ್ಕೆ ನೆಲೆ ನೀಡುವ, ಗಣ ತಂತ್ರವನ್ನು ನಾಶಗೊಳಿಸುವ ಕಾಂಗ್ರೆಸ್ ಪ್ರಯತ್ನವನ್ನು ಮೊಳಕೆಯಲ್ಲಿಯೇ ಚಿವುಟಿ ಹಾಕಬೇಕಾದ್ದು ಜನತೆಯ ಹಾಗೂ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಆದ್ಯ ಕರ್ತವ್ಯ ಆ ಕರ್ತವ್ಯದಲ್ಲಿ ಮುಂದಾಗೋಣ.

— ಎನ್ಕೆ

ಮತೀಯ ದಂಗೆಗಳಿಗೆ ಇಂದಿರಾ ಬೆಂಬಲ?

ಈಗಿರುವ ಸಂವಿಧಾನದಲ್ಲಿ ತಿದ್ದುಪಡಿ ಮಾಡಿ ಅಧ್ಯಕ್ಷೀಯ ಪದ್ಧತಿಯ ಆಳ್ವಿಕೆ ತರುವ ದುರುದ್ದೇಶದಿಂದಲೇ ಅಸ್ಸಾಂ, ಪಂಜಾಬ್ ಸಮಸ್ಯೆಗಳನ್ನು ಜೀವಂತ ಉಳಿಸಿ ಕೊಂಡಿರುವುದಷ್ಟೇ ಅಲ್ಲ, ಮತೀಯ ದಂಗೆಗೂ ಆಶ್ರಯ ನೀಡುತ್ತಿದ್ದಾರೆ ಇಂದಿರಾ ಗಾಂಧಿ ಎಂಬ ಸಂಶಯ ಮುಂಬಯಿ ಭೀವಂಡಿಗಳಲ್ಲಿ ನಡೆದ ಮತೀಯ ಗಲಭೆಯಿಂದ ಬಲಗೊಳ್ಳುತ್ತಿದೆ.

ಜನೇವರಿ 21ರಂದು ಮುಂಬಯಿಯಲ್ಲಿ ಸೇರಿದ ಶಿವಸೇನೆಯ ಸಮಾವೇಶದಿಂದಲೇ ಮಹಾರಾಷ್ಟ್ರದಲ್ಲಿ ಜಾತೀಯ-ಮತೀಯ ದ್ವೇಷದ ಕಿಡಿ ಹಾರಾಡಲು ಪ್ರಾರಂಭಿಸಿತ್ತು. ಶಿವಸೇನೆ ಮುಖಂಡ ಬಾಳ ಠಾಕ್ರೆಯವರ ಮುಸ್ಲಿಂ ವಿರೋಧಿ ಭಾಷಣಗಳೂ, ಅವರ ಬೆಂಬಲಿಗರ ಚಟುವಟಿಕೆಗಳೂ ಅವರ ಪರ ಪತ್ರಿಕೆಗಳಲ್ಲಿಯ ಲೇಖನಗಳೂ ಜಾತೀಯ ದ್ವೇಷಕ್ಕೆ ಎಣ್ಣೆ ಉಗ್ಗುತ್ತಿದವು.

ಹದಿನೈದು ವರ್ಷಗಳಿಂದ ಕಾಂಗ್ರೆಸ್ಸಿನ ಸಹಪಾಠಿಯಾಗಿದ್ದ ಮುಸ್ಲಿಂ ಲೀಗಿನ ಲೋಕ ಸಭೆಯ ಸದಸ್ಯ ಜಿ.ಎಂ. ಬನಟವಾಲಾ ಅವರು ಕೇಂದ್ರ ಗೃಹಮಂತ್ರಿ ಪಿ. ಸಿ. ಸೇಠಿ ಯವರನ್ನು ಮೇ 9ರಂದು ಭೇಟಿಮಾಡಿ ಲಿಖಿತ ಪತ್ರದ ಮೂಲಕ ಬಾಳಠಾಕ್ರೆ ಯವರ ಚಟುವಟಿಕೆಗಳ ಕುರಿತು ಅವರ ಗಮನ ಸೆಳೆದು ಉಗ್ರ ಕ್ರಮ ಕೈಗೊಳ್ಳುವಂತೆ ವಿನಂತಿ ಮಾಡಿಕೊಂಡಿದ್ದರು. ಬಾಳ ಠಾಕ್ರೆಯವರ ಪ್ರಚೋದನ ಕಾರಿ ಲೇಖನ ಮತ್ತು ಭಾಷಣದ ವಿರುದ್ಧ ಮೇ 11 ರಂದು ಕಾಂಗ್ರೆಸ್ ಶಾಸಕ ಎ. ಆರ್. ಖಾನ್ ಎಂಬುವರು ಪ್ರತಿಭಟನಾ ಮೆರವಣಿಗೆ ತೆಗೆದು ಬಾಳ ಠಾಕ್ರೆಯವರ ಫೋಟೋಕ್ಕೆ ಚಪ್ಪಲಿಗಳ ಹಾರ ಹಾಕಿದರು. ಮೇ 16 ರಂದು ಶಿವಸೇನೆ ಸಂಘಟಿಸಿದ ಮುಂಬಯಿ ಬಂದ್ ಆಗಲೀ, ಅದೇ ದಿವಸ ಭೀವಂಡಿಯಲ್ಲಿ ಶಿವಸೇನಾ ಕಛೇರಿಯ ಮುಂದೆ ಹಾರಿಸಿದ ಹಸುರು ಧ್ವಜದ ಘಟನೆಯಾಗಲೀ ರಾಜ್ಯ ಸರ್ಕಾರದ ಗಮನ ಸೆಳೆಯದಿರುವುದು, ಮತೀಯ ದ್ವೇಷ ಹಬ್ಬಿಸುವವರ ವಿರುದ್ಧ ಸಕಾಲಿಕ ಕ್ರಮ ಕೈಗೊಳ್ಳಬೇಕೆಂಬ ವಿಚಾರ ಮಾಡದಿರುವುದನ್ನು ನೋಡುವಾಗಲೇ, ಗೊಂದಲವುಂಟುಮಾಡಲು ಬಾಳಠಾಕ್ರೆಯವರನ್ನು ಕಾಂಗ್ರೆಸ್ ಮುಖಂಡರು ಸರಿಯಾಗಿಯೇ ಉಪಯೋಗಿಸುತ್ತಿದ್ದಾರೆಂಬುದು ಸ್ಪಷ್ಟವಾಗಿ ಕಂಡುಬರುತ್ತದೆ.

ತನ್ನ ಪ್ರಜಾಪ್ರಭುತ್ವ ವಿರೋಧಿ ಧೋರಣೆಯ ಸಾಧನೆಗಾಗಿ ಕಾಂಗ್ರೆಸ್ ಮುಖಂಡರು ಜನಜೀವನವನ್ನೇ ನಾಶ ಮಾಡುವಂಥ ಘಟನೆಗಳನ್ನು ತಡೆಹಿಡಿಯದೆ ನಿರಪರಾಧಿಗಳು ಆಸ್ತಿ ಪ್ರಾಣಗಳನ್ನು ಬಲಿಕೊಡಬೇಕಾಗುವಂಥ ನೀಚ ಕೃತ್ಯಗಳನ್ನು ಮಾಡಲು ಹೇಸುವುದಿಲ್ಲೆಂಬುವುದಕ್ಕೆ ಭೀವಂಡಿ-ಮುಂಬಯಿ ದಂಗೆಗಳೇ ಸಾಕ್ಷಿ.

ಕಾಶ್ಮೀರ, ಪ. ಬಂಗಾಳ, ಕರ್ನಾಟಕಗಳಲ್ಲಿ ಹಿಂಸೆ - ಅತ್ಯಾಚಾರಗಳಿಗೆ ಮಿತಿಯೇ ಇಲ್ಲೆಂದು ಮಹಡಿಯ ತುದಿಯಿಂದ ಬೊಬ್ಬಿಡುತ್ತಿರುವ ಇಂದಿರಾ ಗಾಂಧಿಯವರ ಚೇಲಗಳು, ಮುಂಬಯಿ ಭೀವಂಡಿಗಳಲ್ಲಿ ದುಡಿದು ಹೊಟ್ಟೆ ತುಂಬಿಸಿಕೊಳ್ಳುತ್ತಿರುವ ಮುಸ್ಲಿಂ ಮತ್ತಿತರ ಲಕ್ಷಾವಧಿ ಬಡ ಜನರು ಸುಡಲ್ಪಡುವಾಗ, ಕೊಲ್ಲಲ್ಪಡುವಾಗ, ಮನೆ ಮಠಗಳನ್ನು ಕಳೆದುಕೊಂಡು ದಿಕ್ಕೇಡಿಗಳಾಗಿ ಓಡುತ್ತಿರುವಾಗ ಮಹಾರಾಷ್ಟ್ರ ಸರಕಾರ ಜನ ರಕ್ಷಣೆಯ ಶಾಂತಿಪಾಲನೆಯ ಜವಾಬ್ದಾರಿ ನಿರ್ವಹಿಸಲು ಹಿಂದೇಟು ಹಾಕುತ್ತಿರುವುದರ ಅರ್ಥವೇನು ? ಇಷ್ಟೆಲ್ಲದೊಂಬಿಗೆ ಕಾರಣಭೂತನಾದ ಬಾಳಠಾಕ್ರೆ ಮತ್ತು ಅವನ ಶಿವಸೇನೆಯ ಕುರಿತು ವಸಂತದಾದಾ ಪಾಟೀಲ ಮತ್ತು ಇಂದಿರಾಗಾಂಧಿ ಯಾಕೆ ಮೌನ ಆಚರಿಸುತ್ತಿದ್ದಾರೆ. ಇಂದಿರಾ ಪ್ರತಿಷ್ಠಾನದಲ್ಲಿ ಕೋಟ್ಯಾವಧಿ ಹಣ ಎತ್ತಿ ಹಾಕಿ ಕೋರ್ಟಿನಲ್ಲಿ ಮೊಕದ್ದಮೆಯನ್ನೆದುರಿಸುತ್ತಿರುವ ಅಂತುಳೆಯವರಿಗೆ ಭೀವಂಡಿ ಮುಂಬಯಿಗಳಲ್ಲಿ ಜಾತೀಯ ಗಲಭೆಗೆ ತುತ್ತಾದವರಿಗೆ ಪುನರ್ವಸತಿಯ ಜವಾಬ್ದಾರಿಯನ್ನು ಒಪ್ಪಿಸಿರುವುದರ ಅರ್ಥವೇನು?

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ಮುಖಂಡತ್ವದಲ್ಲಿರುವ ಪಶ್ಚಿಮ ಬಂಗಾಲ, ತ್ರಿಪುರಾ ರಾಜ್ಯಗಳಲ್ಲಿ ಯಾವ ರೀತಿಯ ಮತೀಯ ಧರ್ಮೀಯ ಗಲಭೆಗಳಾಗಲೀ, ಘಟಿಸಲು ಅವಕಾಶ ಮಾಡಿಕೊಡುತ್ತಿಲ್ಲ. ಹಿಂದು—ಮುಸಲ್ಮಾನರು ಹಾಗೆಯೇ ಇತರ ಜಾತಿಯವರೆಲ್ಲ ಸೌಹಾರ್ದರೀತಿಯಲ್ಲಿ ಜೀವನ ನಡೆಸಲು ಸಾಧ್ಯವಾದರೆ ಮಹಾರಾಷ್ಟ್ರ, ಪಂಜಾಬ್‌ಗಳಲ್ಲಿ ಅದು ಅಸಾಧ್ಯವೇ ಯಾಕೆ ? ಸಾರ್ವಜನಿಕರು ಇದರ ಕುರಿತು ಚಿಂತಿಸುವುದು ಅತ್ಯಗತ್ಯ.

ಪಶ್ಚಿಮ ಬಂಗಾಲ

ಎಡರಂಗದ ಧ್ವಜದಡಿಯಲ್ಲಿ ಮುನ್ನಡೆ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ಮುಖಂಡತ್ವದ ಪಶ್ಚಿಮ ಬಂಗಾಲದ ಎಡರಂಗ ಸರಕಾರದ 36 ಅಂಶಗಳ ಕಾರ್ಯಕ್ರಮ ಸರ್ವೇಸಾಮಾನ್ಯ ಜನತೆಗೆ ಸಾಮಾಜಿಕ ಮತ್ತು ಆರ್ಥಿಕ ಹಕ್ಕುಗಳನ್ನೊದಗಿಸುವುದರಲ್ಲಿ ಬಹಳ ಪ್ರಗತಿ ಸಾಧಿಸಿದೆ. ಭೂಮಿ ಮತ್ತು ಭೂ ಸುಧಾರಣೆ, ಸ್ವತಃ ಅಧಿಕಾರ ನಡೆಸುವ ಸ್ಥಳೀಯ ಸಂಸ್ಥೆಗಳು, ಕೈಗಾರಿಕಾ ಸಂಬಂಧ, ಸಾರ್ವಜನಿಕ ಆರೋಗ್ಯ, ಶಿಕ್ಷಣ, ನಗರ ಯೋಜನೆ, ವಾರ್ತಾ ಮತ್ತು ಸಂಸ್ಕೃತಿಗಳಿಗೆ ಹೆಚ್ಚಿನ ಮಹತ್ವ ಕೊಡಲಾಗಿದೆ.

1983 ಡಿಸೆಂಬರ್ ಕೊನೆಯವರೆಗೆ ಸಮಾಜದಲ್ಲಿ ಅತ್ಯಂತ ಹೆಚ್ಚು ತುಳಿತಕ್ಕೆ ತುತ್ತಾದ ಹರಿಜನ – ಗಿರಿಜನ ಮತ್ತು ಇತರ ಭೂ ಹೀನರಿಗೆ 8 ಲಕ್ಷ ಎಕರೆ ಭೂಮಿಯನ್ನು ಹಂಚಲಾಗಿದೆ. ಇದರಿಂದಾಗಿ 15 ಲಕ್ಷ ಜನರಿಗೆ ಲಾಭವಾಗಿದೆ. ರಾಷ್ಟ್ರಾಧ್ಯಕ್ಷರು ಪಶ್ಚಿಮ ಬಂಗಾಲ ಭೂ ಸುಧಾರಣಾ ತಿದ್ದುಪಡಿ ಮಸೂದೆಗೆ ಮಂಜೂರಿ ಕೊಡುತ್ತಿದ್ದರೆ (ಕಳೆದ ಮೂರು ವರ್ಷಗಳಿಂದಲೂ ಆ ಮಸೂದೆ ರಾಷ್ಟ್ರಾಧ್ಯಕ್ಷರ ಸಹಿಗಾಗಿ ದಾರಿಕಾಯುತ್ತಿದೆ) ಇನ್ನೂ ಹೆಚ್ಚು ಬಡವರಿಗೆ ಭೂಮಿ ಕೊಡಿಸಬಹುದಾಗಿತ್ತು.

ಒಕ್ಕಲುತನದ ರಂಗವನ್ನು ಇನ್ನೂ ಬಲಗೊಳಿಸಬೇಕು, ವಿಶಾಲಗೊಳಿಸಬೇಕೆಂಬ ಅರಿವಿದ್ದರೂ ಕೂಡ, ಎಡರಂಗ ಸರಕಾರ ರೈತ ಮತ್ತು ಕೃಷಿ ಕಾರ್ಮಿಕರ ನಿಕಟ ಸಹಕಾರದಿಂದ ಜನಹಿತದ ಯೋಜನೆಗಳ ಮೂಲಕ ಒಕ್ಕಲುತನದ ಹುಟ್ಟುವಳಿಯನ್ನು ಹೆಚ್ಚಿಸಿದೆ.

1984-85ರ ಮುಂಗಾರಿನಿಂದಲೇ ಪರಿಣಾಮ ಬೀರುವಂಥ ಹಲವಾರು ನೀರಾವರಿ ಯೋಜನೆಗಳನ್ನು ರಾಜ್ಯ ಸರಕಾರ ಕೈಗೊಂಡಿದೆ. ಇದರ ಜೊತೆಯಲ್ಲಿಯೇ, ರಸಾಯನಿಕ ಗೊಬ್ಬರ ಬೀಜ ವಿತರಣೆ, ಮುಂತಾದ ಉಪಯೋಗಕಾರಕವಾದ ವಸ್ತುಗಳ ಉತ್ಪಾದನೆಯನ್ನು ಹೆಚ್ಚಿಸಿದೆ.

ಎಡರಂಗ ಸರಕಾರ ಹಣದ ಅಭಾವವನ್ನೆದುರಿಸುತ್ತಿದ್ದರೂ ಕೂಡ ಗ್ರಾಮ ಮೂಲದ ಒಕ್ಕಲುತನದ ಆರ್ಥಿಕತೆಯನ್ನು ಬಲಗೊಳಿಸುವ ದೃಷ್ಟಿಯಿಂದ ಅಂಥ ಯೋಜನೆಗಳನ್ನು ಕೈಗೊಂಡು ಸಾಕಷ್ಟು ಪ್ರಗತಿ ಸಾಧಿಸಲಾಗಿದೆ. ಆ ಕಾರಣದಿಂದಾಗಿಯೇ ಒಕ್ಕಲುತನದ ಉತ್ಪಾದನೆ ಹೆಚ್ಚಾಗಿದೆ, ಗುರಿ ಮುಟ್ಟಿದೆ.

ಗ್ರಾಮಾಂತರ ಪ್ರದೇಶದ ಅಭಿವೃದ್ಧಿಯಲ್ಲಿ ಪಂಚಾಯಿತಿಗಳ ಪಾತ್ರ ಮಹತ್ವದಾಗಿದೆ. ಅಧಿಕಾರ ವಿಕೇಂದ್ರೀಕರಣವೇ ಎಡರಂಗ ಸರಕಾರದ ನಿಜವಾದ ಉದ್ದೇಶವಾಗಿದ್ದು, 1977ರಲ್ಲಿ ಅಧಿಕಾರಕ್ಕೆ ಬಂದ ಕೂಡಲೇ ಚುನಾವಣೆ ನಡೆಸಿ ಇಡೀ ಪಂಚಾಯತಿ ಪದ್ಧತಿಯಲ್ಲಿ ಬದಲಾವಣೆಯನ್ನುಂಟು ಮಾಡಿದೆ. 1982ರಲ್ಲಿ ನಡೆದ ಎರಡನೇ ಚುನಾವಣೆಯಲ್ಲಿ 56,000 ಜನರ ಪ್ರತಿಧಿಗಳು ಆರಿಸಿ ಬಂದಿದ್ದರು. ರಾಷ್ಟ್ರೀಯ ಗ್ರಾಮಾಂತರ ಉದ್ಯೋಗ ಯೋಜನೆ ಭೂಹೀನ ಜನರಿಗೆ ಗೃಹ ನಿರ್ಮಾಣ, ಗ್ರಾಮಗಳ ಅಭಿವೃದ್ಧಿ ಮುಂತಾದ ಯೋಜನೆಗಳನ್ನು ಪಂಚಾಯಿತಿಗಳು ಕೈಗೊಂಡಿವೆ. ಪಂಚಾಯಿತಿಗಳ ಪ್ರಗತಿ ಕೆಳಮಟ್ಟದ ಪ್ರಜಾಪ್ರಭುತ್ವದ ನಿಜವಾದ ಪ್ರಗತಿಯ ಸಂಕೇತವಾಗಿದೆ

ಶಿಕ್ಷಣವಿಲ್ಲದೆ ರಾಜ್ಯದ ಊರ್ಜಿತ ಸ್ಥಿತಿ ಶಕ್ಯವಿಲ್ಲೆಂದು ತಿಳಿದು ಎಡರಂಗ ಸರಕಾರ ಶಿಕ್ಷಣಕ್ಕೆ ಬಹಳ ಮಹತ್ವ ನೀಡಿದೆ. ಒಂದು ಸುಸಂಘಟಿತ ಸಮಾಜವನ್ನು ರಚಿಸಲು ಶಿಕ್ಷಣವೇ ಪ್ರಾಥಮಿಕ ಸಾಧನವೆಂಬುದನ್ನು ಮಾನ್ಯತೆ ಮಾಡಲಾಗಿದೆ. ಹಿಂದಿನ 30 ವರ್ಷಗಳ ಕಾಂಗ್ರೆಸ್ ಆಳ್ವಿಕೆಯ ನೀತಿಗೆ ವಿಭಿನ್ನವಾಗಿ ಎಡರಂಗ ಸರಕಾರ ಎಲ್ಲಾ ವರ್ಗದ ಜನರಿಗೂ ಶಿಕ್ಷಣದ ಬಾಗಿಲನ್ನು ತೆರೆದಿಟ್ಟಿದೆ. ಶಿಕ್ಷಣ ಪದ್ಧತಿಯನ್ನು ಪ್ರಜಾಸತ್ತಾತ್ಮಕವನ್ನಾಗಿ ಮಾಡಿ, ಶಿಕ್ಷಣ ಸಂಸ್ಥೆಗಳಿಗೆ ಸಂಪೂರ್ಣ ಸ್ವಾತಂತ್ರ್ಯ ಒದಗಿಸಲಾಯಿತು. ಇಂಥ ಕಾರ್ಯಕ್ರಮದಲ್ಲಿ ಸೆನೇಟ್ ವೈಸ್ ಚಾನ್ಸಲರನ್ನು ಚುನಾಯಿಸಬೇಕೆಂಬ ಕಲ್ಕತ್ತಾ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ ಅತಿ ಮಹತ್ವದ ಭಾಗವಾಗಿದೆ. ಇಂಥ ಪ್ರಜಾಪ್ರಭುತ್ವವಾದಿ ವಿಧೇಯಕಕ್ಕೆ ವಿಶ್ವವಿದ್ಯಾಲಯಕ್ಕೆ ಈಗಿನ ಚಾನ್ಸಲರಾಗಿರುವ ಗವರ್ನರರು ಇನ್ನೂ ಒಪ್ಪಿಗೆ ನೀಡದಿರುವುದು ವಿಷಾದನೀಯ.

ಕೈಗಾರಿಕಾ ಸಂಬಂಧದ ಕ್ಷೇತ್ರದಲ್ಲಿ ಎಡರಂಗ ಸರಕಾರದ ಮುಖ್ಯ ಉದ್ದೇಶವೇನೆಂದರೆ ಸೌಹಾರ್ದ ಸಂಬಂಧ ಉಳಿಸಿಕೊಳ್ಳುವುದಾಗಿದೆ. ಮಾಲಿಕವರ್ಗ ಕಾರ್ಖಾನೆಗಳನ್ನು ಮುಚ್ಚಿ, ಲಾಕೌಟ್ ಮಾಡಿದ ಕಾರಣ ಕಾರ್ಮಿಕರಿಗೆ ಹಾನಿಯಾದರೂ, ಇತ್ತೀಚಿಗಿನ ನಾರು ಕೆಲಸಗಾರರ ಯಶಸ್ವಿ ಹೋರಾಟ, ಚಹ, ಇಂಜಿನಿಯರಿಂಗ್ ಮತ್ತಿನ್ನಿತರ ಕಾರ್ಖಾನೆಗಳಲ್ಲಿಯ ಒಪ್ಪಂದಗಳಿಂದ ಕಾರ್ಮಿಕರಿಗೆ ಲಾಭವಾಗಿದೆ. ಇ.ಎಸ್ ಐ. ಯೋಜನೆಯನ್ನು ಜಾರಿಗೊಳಿಸಲಾಗಿದೆ ಮಾಲಕರು ಪ್ರಾವಿಡೆಂಟ್‌ಫಂಡ್ ಹಣವನ್ನು ತುಂಬದಿರುವುದನ್ನು ತಪ್ಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಇದರಲ್ಲಿ ಕೂಡ ಕೇಂದ್ರ ಸರಕಾರ ಪ್ರಜಾಪ್ರಭುತ್ವ ನೀತಿಗೆ ವಿರುದ್ಧವಾಗಿ ವರ್ತಿಸುತ್ತಿದೆ. ಗುಪ್ತ ಮತದಾನದ ಮೂಲಕ ಕಾರ್ಮಿಕ ಪ್ರತಿನಿಧಿಗಳನ್ನು ಮ್ಯಾನೇಜ್‌ಮೆಂಟ್ ಬೋರ್ಡ್‌ಗಳಲ್ಲಿ ಸೇರಿಸಿಕೊಳ್ಳಬೇಕೆಂಬ ಕಾರ್ಮಿಕ ಸಂಘಗಳ (ಪಶ್ಚಿಮ ಬಂಗಾಲ ತಿದ್ದುಪಡಿ) ಮಸೂದೆಗೆ ಅಧ್ಯಕ್ಷರ ಮನ್ನಣೆ ತಡೆ ಹಿಡಿಯಲಾಗಿದೆ.

ಸಂಬಳ ನಿವೃತ್ತಿ ವೇತನಗಳಲ್ಲಿ ಹೆಚ್ಚಳ ಮುಂತಾದ ಕ್ರಮಗಳ ಮೂಲಕ ಪೋಲೀಸರಿಗೆ ಹಲವಾರು ಅನುಕೂಲತೆಗಳನ್ನೊದಗಿಸಿ, ರಾಜ್ಯದಲ್ಲಿ ಶಾಂತಿ, ಕಾನೂನು ಪಾಲನೆಯನ್ನು ಸುಧಾರಿಸಲಾಗಿದೆ. ಆದರೆ ಈ ಖಾತೆಯಲ್ಲಿಯ ಒಂದು ಸಣ್ಣ ಗುಂಪು ತನ್ನ ಹಳೇ ಚಟಗಳನ್ನು ಬಿಟ್ಟುಕೊಡಲು ನಿರಾಕರಿಸುತ್ತಿದೆ.

ಆಸ್ಪತ್ರೆ, ಆರೋಗ್ಯ ಕೇಂದ್ರಗಳನ್ನು ಹೆಚ್ಚಿಸಿ, ಆಸ್ಪತ್ರೆಗಳ ಆಡಳಿತೆಯನ್ನು ಸುಧಾರಿಸಿ ಸಾಕಷ್ಟು ಔಷಧಗಳನ್ನು ಪೂರೈಸಿ ಆರೋಗ್ಯ ಖಾತೆಯನ್ನು ಸುಧಾರಿಸಲಾಗಿದೆ. ಕೇಂದ್ರದ ರಾಷ್ಟ್ರೀಯ ಆರೋಗ್ಯ ಧೋರಣೆ ಎಂಬುದಿಲ್ಲದಿದ್ದರೂ ಕೂಡ, ರಾಜ್ಯದ ಕೆಲವು ಜ್ಯೂನಿಯರ್ ಡಾಕ್ಟರ್‌ರುಗಳು ಸಹಕರಿಸದಿದ್ದರೂ ಕೂಡ, ರಾಜ್ಯದ ಜನರ ಆರೋಗ್ಯ ಕಾಪಾಡಿಕೊಂಡು ಹೋಗುವಲ್ಲಿ ರಾಜ್ಯ ಸರಕಾರ ಜವಾಬ್ದಾರಿಯನ್ನು ಉಳಿಸಿಕೊಂಡಿದೆ. ವಿದ್ಯುಚ್ಛಕ್ತಿ ಉತ್ಪಾದನೆ, ವಾಹತುಕ, ಸಾಮಾಜಿಕ ಕಲ್ಯಾಣ ಕೆಲಸಗಳು ಮುಂತಾದ ಅಭಿವೃದ್ಧಿ ಕೆಲಸಗಳ ಮೂಲಕ ಪುರೋಗಾಮಿ, ಆರೋಗ್ಯಕರ ಹಾಗೂ ಜನತಾಪರವಾದ ವಾತಾವರಣ ಉಂಟುಮಾಡಿ, ಪುರೋಗಾಮಿ ವಿರೋಧವಾದ ಸಂಸ್ಕೃತಿ ಪುನರುತ್ಥಾನವಾಗದಂತ ವಾತಾವರಣ ಉಂಟು ಮಾಡುವುದೇ ಎಡರಂಗ ಸರಕಾರದ ಮೂಲ ಉದ್ದೇಶವಾಗಿದೆ.

ಬಂಡವಳಶಾಹಿ ಭೂ ಮಾಲಕ ಪರ ಸಂವಿಧಾನದ ಆಯಕಟ್ಟಿನೊಳಗೆ ಎಡರಂಗ ಸರಕಾರ ಕೆಲಸ ಮಾಡಬೇಕಾಗಿ ಬಂದಿರುವುದರಿಂದ ಈ ಸಾಧನೆಗಳೆಲ್ಲ ಹೇಳಿಕೊಳ್ಳುವಂಥವುಗಳಾಗಲಿಕ್ಕಿಲ್ಲ. ಕೇಂದ್ರ ಸರಕಾರ ಹೇರುತ್ತಿರುವ ಆರ್ಥಿಕ ದಿಗ್ಬಂಧನವನ್ನೂ ಗಣನೆಗೆ ತೆಗೆದುಕೊಳ್ಳಬೇಕಾಗಿದೆ. ರಾಜ್ಯದ ಆರ್ಥಿಕ ಅಭಿವೃದ್ಧಿಯ ಕಾರ್ಯಕ್ರಮಗಳನ್ನೆಲ್ಲ ಯೋಜನಾ ಆಯೋಗ ಮತ್ತು ರಾಷ್ಟ್ರೀಯಅಭಿವೃದ್ಧಿ ಕೌನ್ಸಿಲ್ ತಮ್ಮ 'ತಪ್ಪು ಕೋಣೆ'ಯಲ್ಲಿ ಪರಾಮರ್ಶಿಸುತ್ತಿರುವುದರಿಂದ, ತ್ವರಿತ ಗತಿಯಲ್ಲಿ ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸಲು ಸಾಧ್ಯವಾಗುತ್ತಿಲ್ಲ.

ಆರ್ಥಿಕ ಮಂತ್ರಿ ಪ್ರಣಬ ಮುಖರ್ಜಿಯವರ ಮೂಲಕ ಕೇಂದ್ರ ಸರಕಾರ ಓವರ್‌ಡ್ರಾಫ್ಟಿನ ಕುರಿತು ಅನಾವಶ್ಯಕ ಅಪಪ್ರಚಾರ ನಡೆಸುತ್ತಿದೆ. ನಮ್ಮ ಅಂದಾಜಿನ ಪ್ರಕಾರ ಹೋದವರ್ಷ ಕೇಂದ್ರ ಸರಕಾರ ತನ್ನ ಅಂದಾಜು ಪತ್ರಿಕೆಯ ಕೊರತೆ ನೀಗಿಸಿಕೊಳ್ಳುವ ಸಲುವಾಗಿ ಹೊಸ ನೋಟುಗಳನ್ನು ಛಾಪಿಸಿದೆ. ಅದು 22 ರಾಜ್ಯಗಳು ಪಡೆದ ಓವರ್ ಡ್ರಾಫ್ಟಗಳಿಗಿಂತಲೂ ಬಹಳಷ್ಟು ಮೀರಿದೆಂದು ತಿಳಿದು ಬರುತ್ತದೆ.

ಜನತಾ ಪರ ಕಾರ್ಯಕ್ರಮಗಳ ಅನುಷ್ಠಾನದಿಂದ ಎಡರಂಗ ಸರಕಾರದ ಗಮನವನ್ನು ಬೇರೆಡೆ ಎಳೆಯುವ ಸಲುವಾಗಿ ಕಾಂಗ್ರೆ ಮುಖಂಡರು ವಿಧಾನ ಸಭೆಯ ಒಳಗೂ–ಹೊರಗೂ ಕ್ಯಾದೆ-ಕಾನೂನಿನ ಸಮಸ್ಯೆ ಉಂಟುಮಾಡುತ್ತಿದ್ದಾರೆ. ಬಂಡವಳಶಾಹಿ ಪತ್ರಿಕೆಗಳೂ ಅವರ ಚಟುವಟಿಕೆಗಳಿಗೆ ಪ್ರಚಾರ ಕೊಡುತ್ತಿವೆ. ಕೇಂದ್ರದ ಗೃಹ ಶಾಖೆಯ ವರದಿ ಪ್ರಕಾರ ಕಾಂಗ್ರೆ ಆಡಳಿತೆಯಲ್ಲಿರುವ ರಾಜ್ಯಗಳಲ್ಲಿ ಪಶ್ಚಿಮ ಬಂಗಾಲಕ್ಕಿಂತಲೂ ಹೆಚ್ಚು ತರತರದ ಗುನ್ಹೆಗಳು ನಡೆದಿವೆಂದು ಪ್ರಕಟಿಸಿದೆ.

ಇತ್ತೀಚಿಗೆ ಹಲವಾರು ಚರಿತ್ರಾರ್ಹ ಕಾರ್ಮಿಕ ಚಳುವಳಿಗಳು ನಡೆದರೂ ಕೂಡ ಕಾಯಿದೆ–ಕಾನೂನಿನ ಸಮಸ್ಯೆಗಳು ಉಂಟಾಗಿರಲಿಲ್ಲ. ಕಾಂಗ್ರೆನವರೇ ಶಾಂತಿ-ಸೌಹಾರ್ದತೆಯನ್ನು ಕದಡುವ, ಕಾನೂನು ಭಂಗ ಮಾಡುವ ಉದ್ಯೋಗದಲ್ಲಿ ತೊಡಗಿದ್ದಾರೆ. ಸಮಾಜದ್ರೋಹಿಗಳು ಅವರ ಚಟುವಟಿಕೆಗಳಲ್ಲಿ ಸೇರಿಕೊಂಡಿರುತ್ತಾರೆ. ಹೆಮನ್ ಮೊಂಡೋಲ್ ಎಂಬ ಒಬ್ಬ ಕುಪ್ರಸಿದ್ಧ ಕ್ರಿಮಿನಲ್ ಪುಢಾರಿ ಕೆಲವು ದಿವಸಗಳ ಹಿಂದೆ ಜೈಲಿನಿಂದ ಜಾಮೀನಿನ ಮೇಲೆ ಬಿಡುಗಡೆಯಾದಾಗ ಕಾಂಗ್ರೆ ಶಾಸಕರಾದ ಸುನಿತ ಚಟರ್ಜಿ ಮತ್ತು ಪ್ರಫುಲ್ಲಕಾಂತಿಘೋಷ್‌ರು ಅವನನ್ನು ವಿಜೃಂಭಣೆಯಿಂದ ಸ್ವಾಗತಿಸಿದ್ದರು. ಕಾಂಗ್ರೆಸ್ ಜನರ ನೀತಿ ಎಂಥಾದ್ದು, ಅವರ ಕೈ ಎಷ್ಟು ಉದ್ದವಾಗಿದೆಂಬುದಕ್ಕೆ ಇದು ಸಾಕ್ಷಿ.

ಇಷ್ಟೆಲ್ಲ ಅಡೆತಡೆ ಇದ್ದರೂ, ಅಪಪ್ರಚಾರವಿದ್ದರೂ, ಬಂಡವಳಶಾಹಿ-ಭೂ ಮಾಲಕ ಸಂವಿಧಾನದ ಆಯಕಟ್ಟಿನೊಳಗೆ ಎಡರಂಗ ಸರಕಾರ ಶಕ್ಯವಿದ್ದ ಅಭಿವೃದ್ಧಿ ಕಾರ್ಯ ಕ್ರಮಗಳನ್ನೆಲ್ಲ ಕೈಗೊಂಡಿದೆ. ಅಂಥ ಸರಕಾರದ ವಿರುದ್ಧ ನಡೆಯುವ ಅಪಪ್ರಚಾರವನ್ನು ಎದುರಿಸಿ, ಸರಕಾರವನ್ನು ರಕ್ಷಿಸುವುದು ಪ್ರತಿಯೊಬ್ಬ ನಾಗರೀಕನ, ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಕರ್ತವ್ಯವಾಗಿದೆ. ಆ ಕರ್ತವ್ಯವನ್ನು ಪೂರ್ಣಗೊಳಿಸಲು ಎಲ್ಲರೂ ಮುಂದಾಗಿರಿ. ●

ರೈತರ ಪಿಕೆಟಿಂಗ್‌ಗೆ ಡಿ. ವೈ. ಎಫ್. ಐ. ಬೆಂಬಲ

ಜೂನ್ 11ರ ಕರ್ನಾಟಕ ಪ್ರಾಂತ ರೈತ ಸಂಘಟನೆಯ ರಾಜ್ಯ ಮಟ್ಟದ ಪಿಕೆಟಿಂಗ್ ಕಾರ್ಯಕ್ರಮಕ್ಕೆ ಪ್ರಜಾಸತ್ತಾತ್ಮಕ ಯುವಜನ ಸಂಘಟನೆ ಸಿಂಧನೂರು ನಗರ ಸಮಿತಿ ಬೆಂಬಲ ವ್ಯಕ್ತಪಡಿಸಿದೆ.

ದಿ. 25-5-84 ರಂದು ಸಂಘಟನೆಯ ಸಿಂಧನೂರು ನಗರ ಸಮಿತಿಯು ಸಭೆ ಸೇರಿ ಈ ಕೆಳಗಿನ ನಿರ್ಣಯಗಳನ್ನು ತೆಗೆದುಕೊಂಡಿದೆ.

1) ಸಿಂಧನೂರು ನಗರ ಪ್ರದೇಶದಲ್ಲಿ ಸುಮಾರು 10 ಸಹಸ್ರಕ್ಕೂ ಮೇಲ್ಪಟ್ಟು ವಸತಿ ರಹಿತರಿದ್ದು ನಗರಾದ್ಯಂತ ಈ ಸಮಸ್ಯೆಯು ಬಡ ಜನತೆಗೆ ತೀವ್ರವಾಗಿ ಭಾದಿಸುತ್ತಲಿದೆ. ಈ ಹಿನ್ನೆಲೆಯಲ್ಲಿ ಸುಮಾರು ವರ್ಷಗಳಿಂದ ಇಲ್ಲಿಯ ಹಲವು ಕೊಳಚೆ ಪ್ರದೇಶದ ನಿವಾಸಿಗಳು ಹೋರಾಟ ಮಾಡುತ್ತಾ ಬಂದಿದ್ದರೂ ಸರಕಾರವು ಇತ್ತಕಡೆ ಗಮನ ಹರಿಸಿರುವುದಿಲ್ಲ. ಆದ್ದರಿಂದ ಇಲ್ಲಿಯ ಕೊಳಚೆ ಪ್ರದೇಶದ ನಿವಾಸಿಗಳಿಗೆ ವಸತಿಗಳನ್ನು ಒದಗಿಸಲು ದಿ: 4-6-84 ರಿಂದ 10-6-84ರ ವರೆಗೆ ಸ್ಥಳೀಯ ತಹಶೀಲ ಆಫೀಸ್ ಮುಂದುಗಡೆ ಧರಣಿ ಸತ್ಯಾಗ್ರಹ ಕೂಡಲು ನಿರ್ಧರಿಸಿದೆ.

2) ದಿನಾಂಕ. 11-6-84 ರಂದು ರಾಜ್ಯ ಮಟ್ಟದ ತೀರ್ಮಾನದ ಪ್ರಕಾರ ಸ್ಥಳೀಯ ಕರ್ನಾಟಕ ಪ್ರಾಂತ ರೈತ ಸಂಘವು ಕರೆಕೊಡಲಾದ ಪಿಕೆಟಿಂಗ್ ಕಾರ್ಯಕ್ರಮವನ್ನು ಬೆಂಬಲಿಸಿ ಹಾಗೂ ಸ್ಥಳೀಯ ಬೇಡಿಕೆಗಳನ್ನು ಈಡೇರಿಸಲು ಸರಕಾರವನ್ನು ಒತ್ತಾಯಿಸಲು ಕರ್ನಾಟಕ ಪ್ರಾಂತ ರೈತ ಸಂಘದೊಡನೆ, ಪ್ರಜಾಸತ್ತಾತ್ಮಕ ಯುವಜನ ಸಂಘಟನೆಯು ಬೃಹತ್ ಪಿಕೇಟಿಂಗ್ ಕಾರ್ಯಕ್ರಮದಲ್ಲಿ ಭಾಗವಹಿಸಲು ನಿರ್ಧರಿಸಲಾಯಿತು.

ಅರುಣ್ ಶೌರಿ "ಬಯಲು" ಗೊಳಿಸಿದ ಟೊಳ್ಳು ಸಂಗತಿಗಳು

ಎಂ. ಬಸವಪುನ್ನಯ್ಯ

ಆಂಗ್ಲ ವಾರಪತ್ರಿಕೆ "ಇಲ್ಲಸ್ಟ್ರೇಟೆಡ್ ವೀಕ್ಲಿ" ಯಲ್ಲಿ ಕಳೆದ ತಿಂಗಳು ಖ್ಯಾತ ಪತ್ರಕರ್ತ ಅರುಣ್‌ಶೌರಿಯವರ ನಾಲ್ಕು ಲೇಖನಗಳ ಒಂದು ಸರಣಿ ಪ್ರಕಟವಾಗಿರುವುದು. ನಮ್ಮ ವಾಚಕರಿಗೆ ತಿಳಿದಿರಬಹುದು. ರಾಷ್ಟ್ರೀಯ ಪತಾಗಾರದಲ್ಲಿನ ದಾಖಲೆಗಳನ್ನು ಆಳವಾಗಿ ಅಧ್ಯಯನ ಮಾಡಿ 1940ರ ದಶಕದಲ್ಲಿ ರಾಷ್ಟ್ರೀಯ ಆಂದೋಲನಕ್ಕೆ ಕಮ್ಯುನಿಸ್ಟರು ಹೇಗೆ "ವಿಶ್ವಾಸಘಾತ" ಮಾಡಿದರು ಎಂಬು 40 ವರ್ಷಗಳ ನಂತರ "ಬಯಲಿ" ಗೆಳೆದಿರುವುದಾಗಿ ವೀಕ್ಲಿ ಮತ್ತು ಶೌರಿ ಹೇಳಿಕೊಂಡಿದ್ದಾರೆ. ಇದಕ್ಕೆ ಉತ್ತರವಾಗಿ ಸಿ. ಪಿ. ಐ. (ಎಂ) ಪರವಾಗಿ ಪಾಲಿಟ್‌ಬ್ಯೂರೋ ಸದಸ್ಯ ಕಾಂ. ಎಂ. ಬಸವಪುನ್ನಯ್ಯನವರ ಲೇಖನಗಳ ಸರಣಿಯನ್ನು ಪ್ರಕಟಿಸಲು "ಇಲಸ್ಟ್ರೇಟೆಡ್ ವೀಕ್ಲಿ" ಒಪ್ಪಿಕೊಂಡಿದೆ. ಆ ಸರಣಿಯ ಕನ್ನಡ ಅನುವಾದವನ್ನು ಈ ವಾರದ ಸಂಚಿಕೆಯಿಂದ "ಐಕ್ಯರಂಗ" ಆರಂಭಿಸುತ್ತಿದೆ.

ಅರುಣ್ ಶೌರಿ ಖ್ಯಾತಿ ಪಡೆದದ್ದು ತನಗೆ ಅಗತ್ಯವಿರುವಷ್ಟೇ ವಿಷಯ ಆಯ್ದುಕೊಳ್ಳುವ "ತನಿಖಾತ್ಮಕ" ಶೈಲಿಯ ಪತ್ರಕರ್ತನಾಗಿ ಈ ನಮೂನೆಗನು ಗುಣವಾಗಿಯೇ ಆತನ ಪ್ರಸಿದ್ಧ ವರದಿಗಳ ಹರಹು ಸೀಮಿತವಾಗಿದ್ದು, ಸ್ವಭಾವತಃ ಅವು ಕೋಲಾಹಲಕಾರಿಯಾಗಿವೆ. ವಿಷಯಗಳನ್ನು ನಾಟಕೀಯವಾಗಿ ಬಯಲುಗೊಳಿಸಿದ ಆತನ ಒಂದೆರಡು ವರದಿಗಳೂ ಇದೇ ಮಾದರಿಯವು. ಈ ನಡುವೆ ನಿಷ್ಕ್ರಿಯನಾದಂತಿದ್ದ ಆತನ ಹೆಸರು ಇತ್ತೀಚೆಗೆ ಭಾರತೀಯ ಕಮ್ಯುನಿಸ್ಟ್ ಆಂದೋಲನದ ಇತಿಹಾಸದ "ಸಂಶೋಧಕ"ನಾಗಿ ಕೊಂಬು-ಕಹಳೆಗಳೊಂದಿಗೆ 'ಇಲಸ್ಟ್ರೇಟೆಡ್ ವೀಕ್ಲಿ"ಯಲ್ಲಿ ಕೇಳ ಬಂತು. ಆದರೆ ಈ "ಸಂಶೋಧನೆ"ಗಳಿಗೆ ಪತ್ರಿಕಾ "ಸ್ಕೂಪ್" (ಪ್ರತಿಸ್ಪರ್ಧಿ ಪತ್ರಕರ್ತರೆಲ್ಲಾ ವಿಷಯ ತಿಳಿಯುವ ಮೊದಲೇ ಅದನ್ನು ತಿಳಿದು ಪ್ರಕಟಿಸುವುದು) ಗಿಂತ ಹೆಚ್ಚಿನ ಬೆಲೆ ಕೊಡಬೇಕಾಗಿಲ್ಲ. ಇಂತಹ ಸ್ಕೂಪ್‌ಗಳಿಗೆ ಯೋಗ್ಯವಾದ ಮಾನದಂಡದಿಂದಲೇ ನೋಡಲು ನಾವು ಇಲ್ಲಿ ಶೌರಿಯ ಬರವಣಿಗೆಗಳನ್ನು ಅಳೆದರೆ, ತನ್ಮೂಲಕ ಆತ ರಾಜಕೀಯವಾಗಿ ಬಯಲಾಗಿರುವುದನ್ನು ಕಾಣುತ್ತೇವೆ.

1942ರಲ್ಲಿ ಕಮ್ಯುನಿಸ್ಟರು ರಾಷ್ಟ್ರೀಯ ಆಂದೋಲನಕ್ಕೆ ವಿಶ್ವಾಸಘಾತ ಬಗೆದರು ಎಂದು ಆಪಾದಿಸಲಾಗಿದೆ. ಅಂದಿಗೂ ಇಂದಿಗೂ 42 ವರ್ಷಗಳ ಅಂತರವಿದೆ. ಈ ಅವಧಿಗೆ ಸಂಬಂಧ ಪಟ್ಟಂತೆ ರಾಷ್ಟ್ರೀಯ ಪತ್ರಾಗಾರದಲ್ಲಿದ್ದ ದಾಖಲೆಗಳನ್ನು ಸಾರ್ವಜನಿಕರಿಗೆ ತೆರೆದು ಒಂದು ದಶಕದ ಮೇಲಾಯಿತು. ಆದ್ದರಿಂದ ಭಾರತೀಯ ರಾಜಕೀಯದ ಈ ಘಟ್ಟದಲ್ಲಿ ಸರಿಯಾಗಿ ಈ "ಚಾರಿತ್ರಿಕ" ಸಂಶೋಧನೆಗಳಿಗೆ ಸ್ಫೂರ್ತಿ ನೀಡಿದ ಮತ್ತು ತನ್ನ "ಬಯಲಿ"ಗೆಳೆಯುವ ಲೇಖನಗಳನ್ನು ಪ್ರಕಟಿಸುವಂತೆ ಪ್ರೇರೇಪಿಸಿದ ಆ ಸಂಗತಿಯಾದರೂ ಯಾವುದು ಎಂಬ ಪ್ರಶ್ನೆಯನ್ನೆತ್ತಬೇಕಾಗುತ್ತದೆ.

ಭಾರತವನ್ನು ಆಳುವ ಸಾಮರ್ಥ್ಯವಿರುವ ಒಂದು ರಾಜಕೀಯ ಪಕ್ಷ ಶ್ರೀಮತಿ ಗಾಂಧಿಯವರ ಕಾಂಗ್ರೆಸ್ ಪಕ್ಷ ಬಿಟ್ಟರೆ ಬೇರೆ ಇಲ್ಲ ಎಂಬ ಅಭಿಪ್ರಾಯವನ್ನು ವ್ಯಾಪಕವಾಗಿ ಹರಡಿಸಿ ಪೋಷಿಸಲಾಗುತ್ತಿದೆ. ಆದರೆ ಐದಾರು ಕಾಂಗ್ರೆಸ್ಸೇತರ ರಾಜ್ಯ ಸರಕಾರಗಳು ಅಸ್ತಿತ್ವದಲ್ಲಿವೆ, ಇಂತಹ ಸರಕಾರಗಳಲ್ಲಿ ಪಶ್ಚಿಮ ಬಂಗಾಳ ಮತ್ತು ತ್ರಿಪುರಗಳಲ್ಲಿ (ಏಳು ವರ್ಷಗಳಿಂದ ಅಧಿಕಾರದಲ್ಲಿರುವ) ಮತ್ತು ಈ ಹಿಂದೆ ಕೇರಳದಲ್ಲಿದ್ದ ಎಡ ಒಲವಿನ ಸರಕಾರಗಳು ಪ್ರಮುಖವಾದವುಗಳು ಎಂಬ ವಾಸ್ತವ ಸಂಗತಿಯನ್ನು ನಿರ್ಲಕ್ಷಿಸುವಂತಿಲ್ಲ. ಸಿ.ಪಿ.ಐ. ಮತ್ತು ಸಿ.ಪಿ.ಐ. (ಎಂ)ಗಳನ್ನು ಮೂಲಭೂತ ಘಟಕಗಳಾಗುಳ್ಳ ಎಡ ಪಕ್ಷಗಳು ಮತ್ತು ಎಡರಂಗ ಸರಕಾರಗಳು ಕಾಂಗ್ರೆಸ್ (ಐ) ಅನುಸರಿಸುತ್ತಿರುವ ಧೋರಣೆಗಳಿಗೆ ಪರ್ಯಾಯವಾದ ಧೋರಣೆಗಳನ್ನು ಜನತೆಯ ಮುಂದಿಡುತ್ತಿವೆ. ರಾಷ್ಟ್ರೀಯ ಮಟ್ಟದಲ್ಲಿ ಎಡ ಮತ್ತು ಪ್ರಜಾಪ್ರಭುತ್ವವಾದಿ ಪರ್ಯಾಯವೊಂದು ಮೂಡಿಬರುತ್ತಿರುವುದು ಸಣಕಲು ದೃಷ್ಟಿಯ ಬೂರ್ಜ್ವಾ ಚಿಂತಕರಿಗೆ ರುಚಿಸದ ಸಂಗತಿ. ಇಂತಹ ನಿರ್ಧಾರಕ ಕಾಲಘಟ್ಟಗಳಲ್ಲಿ ಕಮ್ಯುನಿಸ್ಟರ ವಿರುದ್ಧ ಸುಳ್ಳು ಆರೋಪ ಹೊರಿಸಿ ವ್ಯವಸ್ಥಿತವಾಗಿ ಅಪಪ್ರಚಾರ ನಡೆಸುವುದು ಇವರಿಗೆ ಸುಲಭವಾಗಿ ಸಿಗುವ ಆಯುಧ.

1942ರ ಘಟನೆಗಳನ್ನು "ಅಗೆದು ತೆಗೆಯುವ"ದಕ್ಕೂ ಈ ಪ್ರಶ್ನೆಗೂ ನೇರ ಸಂಬಂಧವಿದೆ. ಅಲ್ಲದೆ ಈ ಘಟನೆಗಳನ್ನು ಈ ಬಗೆಯಲ್ಲಿ ಬಳಸುತ್ತಿರುವುದು ಇದೇ ಮೊದಲನೇ ಬಾರಿಯೇನಲ್ಲ. ಶ್ರೀಮಾನ್ ಶೌರಿಗಿಂತ ಹೆಚ್ಚು ವಿಷಯ ಜ್ಞಾನವಿರುವ ಯಾವುದೇ 'ಸಂಶೋಧಕ'ನಾದರೂ ತನ್ನ ಅಪಪ್ರಚಾರದ ಉದ್ದೇಶವನ್ನು ಮರೆಮಾಡಲಿಕ್ಕೆ 'ಬಯಲು' ಮಾಡುವ ತನ್ನ "ಸಂಶೋಧನೆ"ಗಳ "ಮೌಲಿಕತೆ"ಯನ್ನು ಉಪಯೋಗಿಸಲು ಹಿಂಜರಿಯುತ್ತಿದ್ದ.

ಲೇಖನಗಳ ನಿಜ ಉದ್ದೇಶ

ಶೌರಿ ಮತ್ತು ಆತನಂತಹ ಇತರರಿಗೆ ಅತ್ಯಂತ ಕಿರಿ ಕಿರಿಯುಂಟು ಮಾಡುತ್ತಿರುವ ನಿರ್ದಿಷ್ಟ ಸಂಗತಿಯೆಂದರೆ – ಒಂದೆಡೆ, ಭಾರತೀಯ ಎಡ ಪಂಥ ಮತ್ತು ವಿಶೇಷವಾಗಿ ಸಿ.ಪಿ.ಐ.(ಎಂ)ನ ರಾಜಕೀಯ - ಸೈದ್ಧಾಂತಿಕ ಪ್ರತಿಷ್ಠೆ ಹೆಚ್ಚುತ್ತಿರುವುದು, ಇನ್ನೊಂದೆಡೆ ಬಿ. ಜೆ. ಪಿ. ಮತ್ತು ಲೋಕದಳದ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಕೂಟ ಎಷ್ಟೇ ಗಾಳಿ ತುಂಬಿದರೂ ಮುಂದೆ ಹೆಜ್ಜೆಯಿಡುವಲ್ಲಿ ವಿಫಲವಾಗುತ್ತಿರುವುದು, ಅದೂ ಕೂಡಾ ಆಳುವ ಕಾಂಗ್ರೆಸಿನ ಬಗ್ಗೆ ನಂಬಿಕೆ ಅತ್ಯಂತ ಕೆಳಮಟ್ಟದಲ್ಲಿರುವಾಗ ಸಧ್ಯ ಕಾಂಗ್ರೆಸ್(ಐ)ನ ದುರಾಡಳಿತವನ್ನು ಸಹಿಸುತ್ತಾ ಮುಂದೊಮ್ಮೆ ಬಿ.ಜೆ.ಪಿ. ನೇತೃತ್ವದ ಕೂಟ ಪ್ರಾಯಕ್ಕೆ ಬಂದು ಪ್ರಯಾಣಕ್ಕೆ ಸಜ್ಜಾಗುವ ಆ ದಿನಕ್ಕಾಗಿ ಕಾಯುತ್ತಾ ಕೂರುವುದಷ್ಟೇ ತಮ್ಮ ಹಣೆ ಬರಹ ಎಂಬ ಭಾವನೆಯನ್ನು ಭಾರತೀಯ ಜನ ಸಮೂಹದಲ್ಲಿ ಪ್ರಚುರ ಪಡಿಸಲು ಕೆಲವು ಹತಾಶ ಆಸಕ್ತ ವಲಯಗಳು ಪ್ರಯತ್ನ ನಡೆಸುತ್ತಿವೆ.

ಕಮ್ಯುನಿಸ್ಟ್ ವಿರೋಧೀ ಅಪಲಾಪ ಶುರುಮಾಡಲು ಇನ್ನೊಂದು ಕಾರಣ ಕಮ್ಯುನಿಸ್ಟರ ನೇರ ಸಂಘಟನಾತ್ಮಕ ಹಿಡಿತಕ್ಕಿಂತ ಬಹಳ ದೂರದಲ್ಲಿರುವ ವಲಯಗಳಲ್ಲೂ ಮಾರ್ಕ್ಸ್‌ವಾದೀ ಸಿದ್ಧಾಂತದ ಮತ್ತು ವಿಚಾರಗಳ ಜನಪ್ರಿಯತೆ. ಇದು ಇತ್ತೀಚಿಗಷ್ಟೇ ಮುಕ್ತಾಯಗೊಂಡ ಮಾರ್ಕ್ಸ್ ಮರಣ ಶತಾಬ್ದಿಯ ಆಚರಣೆಗಳ ಸಂದರ್ಭದಲ್ಲಿ ಸ್ಪಷ್ಟವಾಗಿ ವ್ಯಕ್ತಗೊಂಡಿತ್ತು. ಸಿ.ಪಿ.ಐ.(ಎಂ) ಮತ್ತು ಇತರ ಕಮ್ಯುನಿಸ್ಟರ ಜತೆಗೆ ಬಹು ಸಂಖ್ಯೆಯಲ್ಲಿ ಪ್ರಾಧ್ಯಾಪಕ ವರ್ಗ ಮತ್ತು ಇತರ ಬುದ್ಧಿಜೀವಿಗಳು, ಕಾರ್ಮಿಕರು, ಯುವಕರು ಮತ್ತು ವಿದ್ಯಾರ್ಥಿಗಳು ಈ ಸಮಾರಂಭಗಳಲ್ಲಿ ಭಾಗವಹಿಸಿದರು. ಈ ಸಂದರ್ಭದಲ್ಲಿ ಭಾರತದ ಸಂಸತ್ತು ಮಾರ್ಕ್ಸ್ ಮತ್ತು ಆತನ ಬೋಧೆಗಳನ್ನು ಕುರಿತಾಗಿ ಅಂಗೀಕರಿಸಿದ ನಿರ್ಣಯ ಮಾರ್ಕ್ಸ್‌ರ ವಿಚಾರಗಳ ಜನಪ್ರಿಯತೆಯ, ಆತನ ವಿಚಾರಗಳ ಮತ್ತು ಅವುಗಳ ಮಾರ್ಗದರ್ಶನದ ಆಂದೋಲನಗಳ ಬಗ್ಗೆ ಇರುವ ಗೌರವ ಭಾವನೆಯ ಅಳತೆಗೋಲು.

ಈ ಲೇಖನಗಳ "ವಸ್ತು"ವಿಗೆ ಬರೋಣ 1942ರ "ವಿಶ್ವಾಸಘಾತ'ದ ಆಪಾದನೆ ಮಾಡುವಲ್ಲಿ ಆಧುನಿಕ ಭಾರತೀಯ ಇತಿಹಾಸದ ಬಗ್ಗೆ ನಿಜವಾದ ಸಂಶೋಧನೆ ಶೌರಿಯ ಕಾಳಜಿ ಎಂದನಿಸುವುದಿಲ್ಲ. ಅತೀ ದೊಡ್ಡ ಸಾಮ್ರಾಜ್ಯಶಾಹೀ - ವಿರೋಧಿ ಆಂದೋಲನಗಳಲ್ಲಿ ಒಂದಾದ ಭಾರತೀಯ ರಾಷ್ಟ್ರೀಯ ಆಂದೋಲನವನ್ನು, ಅದರಲ್ಲಿ ವಿವಿಧ ವರ್ಗಗಳ, ಪಕ್ಷಗಳ, ವ್ಯಕ್ತಿಗಳ ಪಾತ್ರ ವಿಷಯವನ್ನು ಅರ್ಥ ಮಾಡಿಕೊಳ್ಳುವ ಸಾಮರ್ಥ್ಯ ಶೌರಿಗೆ ಇದೆಯೆಂದೆನಿಸುವುದಿಲ್ಲ. ತನ್ನ ಉದ್ದೇಶ ಸಾಧಿಸಲು ಸಾಕಷ್ಟೆನಿಸುವ ಅಗ್ಗದ ಕಮ್ಯುನಿಸ್ಟ್ – ವಿರೋಧೀ ಭಾವನೆಯನ್ನು ಸಾರ್ವಜನಿಕರಿಗೆ ದಾಟಿಸುವುದಷ್ಟೇ ಶೌರಿಯ ಪ್ರಯತ್ನ ಎಂಬುದು ಸುಸ್ಪಷ್ಟ. ಯಾಕೆಂದರೆ ಆತನ ಲೇಖನಗಳು ರಾಷ್ಟ್ರೀಯ ಚಳವಳಿಯ ಬಗ್ಗೆ ಮತ್ತು ಅದು ಸಂಭವಿಸಿದ ಚಾರಿತ್ರಿಕ ಸನ್ನಿವೇಶಗಳ ಬಗ್ಗೆ ಅಗಾಧ ಪ್ರಮಾಣದ ಅಜ್ಞಾನವನ್ನು ಪ್ರದರ್ಶಿಸಿದೆ.

ಇತಿಹಾಸದ ಬಗ್ಗೆ ಮೂರ್ಖ ಅಜ್ಞಾನ

ಆತ "ನಿತಖಾತ್ಮಕ ಪತ್ರಕರ್ತ" ತಾನೇ! ಆದ್ದರಿಂದ ಕೇವಲ ಕೆಲವು ಅನುಕೂಲಕರ ದಾಖಲೆಗಳನ್ನು ಅವುಗಳ ಸಾಮಾಜಿಕ - ಚಾರಿತ್ರಿಕ ಸಂದರ್ಭದ ಬಗ್ಗೆ ಅನುಭವಹೀನ ಅಜ್ಞಾನದೊಂದಿಗೆ ಪರಿಶೀಲಿಸುವುದರಿಂದಲೇ ಯಾವುದೇ ಒಂದು ಸಾಮಾಜಿಕ ವಿದ್ಯಮಾನವನ್ನು ಅರ್ಥಮಾಡಿಕೊಳ್ಳಬಹುದು ಎಂದು ಆತ ಭಾವಿಸುತ್ತಾರೆ. ಅದೇ ಹೊತ್ತಿಗೆ ಆತನಿಗೆ ನಿಸ್ಸಂಶಯವಾಗಿಯೂ ಏನೂ ತಿಳಿದೇ ಇರದ ಸಂಗತಿಗಳಿಲ್ಲದರ ಬಗ್ಗೆಯೂ ತನಗೆ ಎಲ್ಲಾ ತಿಳಿದಿದೆಯೆಂದು ಆತ ಹೇಳಿಕೊಳ್ಳುತ್ತಾರೆ. ಹೀಗೆ ನಾವೀಗ ನಮ್ಮ ಸ್ವಾತಂತ್ರ್ಯ ಚಳುವಳಿಯ ಬಗ್ಗೆ ಮಾತ್ರವಲ್ಲ ಆಧುನಿಕ ಜಾಗತಿಕ ಇತಿಹಾಸದ ಒಬ್ಬ ಹೊಸ 'ಪರಿಣತ'ನನ್ನು ಕಾಣುತ್ತಿದ್ದೇವೆ.

ಶೌರಿಯ ಲೇಖನಗಳ ಸರಣಿ ಸೋವಿಯತ್ ಸಂಘ ಮತ್ತು ನಾಜೀ ಜರ್ಮನಿಯೊಂದಿಗೆ ಅದು ಮಾಡಿ ಕೊಂಡ ಅನಾಕ್ರಮಣ ಸಂಧಿಯ ಬಗ್ಗೆ ಮೂರ್ಖ ಅಜ್ಞಾನದಿಂದ ಕೂಡಿದ ದೂಷಣೆಯೊಂದಿಗೆ ಆರಂಭವಾಗಿರುವುದು. ಆತನ ಮಟ್ಟಿಗೆ ತುಂಬಾ ದುರದೃಷ್ಟಕಾರಿ. ಇದು ಈ ವಿಷಯದ ಬಗ್ಗೆ ಆತನಿಗೆ ಪರಿಣತಿಯಂತೂ ದೂರವಿರಲಿ, ಕೇವಲ ಸಾಮಾನ್ಯ ಯೋಗ್ಯತೆಯೂ ಇಲ್ಲವೆಂಬುದನ್ನು ಬಯಲಿಗೆಳೆದಿದೆ.

ಎರಡನೇ ಜಾಗತಿಕಯುದ್ಧಕ್ಕೆ ದಾರಿ ಮಾಡಿಕೊಟ್ಟ "ಮೂಲಪಾಪ" ಇದು, ತನ್ಮೂಲಕ ಈಗಲೂ ನಮ್ಮನ್ನು ಕಾಡುತ್ತಿರುವ ಎಲ್ಲಾ "ಕೆಡಕು" ಗಳಿಗೂ ಕಾರಣೀಭೂತ ಎನ್ನುವಂತೆ ಆತ ಚಿತ್ರಿಸಿದ್ದಾರೆ. ಸ್ಟಾಲಿನ್ ವಿರುದ್ಧ ತತ್ಪರತೆಯಿಂದ ಪೋಷಿಸಿಕೊಂಡು ಬಂದಿರುವ ಪೂರ್ವಾಗ್ರಹವನ್ನು ಪೂರ್ಣದುರ್ಲಾಭ ಪಡೆದು ಮೊದಲ ಸಮಾಜವಾದೀ ಪ್ರಭುತ್ವದ ವಿದೇಶಾಂಗ ನೀತಿಯನ್ನು ಖಂಡಿಸುವ ತನ್ನ ಜಾಣತನದ ಬಗ್ಗೆ ಆತ ಬೆನ್ನು ತಟ್ಟಿಕೊಂಡಿದ್ದಾರೆ ಆ ದೇಶದ ವಿದೇಶಾಂಗ ಧೋರಣೆಗೆ ಲೆನಿನ್ ಮತ್ತು ಸ್ಟಾಲಿನ್ ಎಡಬಿಡದೆ ಅನುಸರಿಸಿದ ಕಾರ್ಮಿಕವರ್ಗದ ಅಂತರ್ರಾಷ್ಟ್ರೀಯತೆ ಮತ್ತು ಜಾಗತಿಕ ಕ್ರಾಂತಿಯ ರಕ್ಷಣೆ ಆವೆರಡು ಮಾರ್ಗದರ್ಶಕ ನೀತಿಗಳು ಎನ್ನುವುದರಅರಿವಂತೂಶೌರಿಗಿಲ್ಲ.

ಈ ಕಾಲಘಟ್ಟದ "ಸಂಶೋಧನೆ" ಗಿಳಿಯುವ ಒಬ್ಬ ಲೇಖಕನಿಗೆಕನಿಷ್ಟ 1917ರ ನಂತರದ ರಾಜಕೀಯ ಚರಿತ್ರೆಯ ಭಿನ್ನ—ಭಿನ್ನ ಹಂತಗಳ ಅರಿವಿರಲೇಬೇಕು. ಮೊದಲ ಜಾಗತಿಕ ಯುದ್ಧದ ನಂತರ 1917 ರಿಂದ 1922 ರ ಅವಧಿಯಲ್ಲಿ ಜಾಗತಿಕ ರಾಜಕೀಯ ರಂಗದಲ್ಲಿ ನಿಜವಾಗಿ ಏನು ನಡೆಯಿತು ಎಂಬುದರ ಅರಿವು ಆತನಿಗಿರಲೇಬೇಕು.

ಎರಡನೇಯದಾಗಿ, 1922 – 23 ರಿಂದ 1939 ರ ಆಗಸ್ಟ್ 23 ರಂದು ಸೋವಿಯತ್ ಸಂಘ ಮತ್ತು ಹಿಟ್ಲರನ ಜರ್ಮನಿಯ ನಡುವೆ ಅನಾಕ್ರಮಣ ಸುಧಿಗೆ ಸಹಿ ಬೀಳುವ ವರೆಗಿನ ಅವಧಿಯಲ್ಲಿನ ಬೆಳವಣಿಗೆಗಳು ಆತನಿಗೆ ತಿಳಿದಿರಬೇಕು.

ಮೂರನೇ ಘಟ್ಟವೆಂದರೆ 1939ರ ಸೆಪ್ಟಂಬರ್ 3ರಂದು ಯುದ್ಧದ ಬಹಿರಂಗ ಘೋಷಣೆಯಿಂದ 1941 ರ ಜೂನ್ 22 ರ ವರೆಗಿನ ಅವಧಿ. ಈ ಅವಧಿಯಲ್ಲಿ ಫ್ಯಾಸಿಸ್ಟ್ ಜರ್ಮನಿ ಮತ್ತು ಇಟಲಿ ಸಮಸ್ತ ಪಶ್ಚಿಮ ಮತ್ತು ಪೂರ್ವ ಯುರೋಪನ್ನು ಪೂರ್ಣವಾಗಿ ಗೆದ್ದುಕೊಂಡವು ಅಂತಿಮ ಘಟ್ಟವೆಂದರೆ 1941 ರ ಜೂನ್ 22 ರಿಂದ 1945ರ ಮೇ ನಲ್ಲಿ ನಾಝೀವಾದ ಫ್ಯಾಸಿಸಂ ಮತ್ತು ಜಪಾನೀ ಮಿಲಿಟರಿವಾದ ಧ್ವಂಸಗೊಂಡು ಯುರೋಪ್ ವಿಮೋಚನೆಯಾಗಿ ಜಗತ್ತಿನಲ್ಲಿ ಹಲವಾರು ಹೊಸದಾಗಿ ಸ್ವತಂತ್ರ ದೇಶಗಳು ಉದಯಿಸುವ ವರೆಗಿನ ಅವಧಿಯದ್ದು.

ಕುರುಡು ದುಸ್ಸಾಹಸ

ಸಂಶೋಧಕನೆಂಬ ತನ್ನ ಅಂತಸ್ತಿನ ಬಗ್ಗೆ ಹೆಮ್ಮೆಪಡುವ ಅರುಣ್ ಶೌರಿಗೆ ಆಧುನಿಕ ಸಾಮಾಜಿಕ ಚರಿತ್ರೆಯ ಈ ಭಿನ್ನ ಘಟ್ಟಗಳಬಗ್ಗೆ ಪೂರ್ಣ ಅಜ್ಞಾನವಿದೆ ಅಥವಾ ಆತ ವಾಸ್ತವ ಸಂಗತಿಗಳನ್ನು ಎದುರಿಸಿ ಅವನ್ನು ತನ್ನ ವಾಚಕರ ಮುಂದಿಡಲು ಹಿಂಜರಿಯುತ್ತಿದ್ದಾರೆ. ಜಾಗತಿಕ ಬಂಡವಾಳಶಾಹಿ ಮತ್ತು ಸಾಮ್ರಾಜ್ಯಶಾಹಿಯ ಬೇವಣಿಗೆ. ಜಾಗತಿಕಸಮಾಜವ್ಯವಸ್ಥೆಯಬುಡವನ್ನೇ ಅಲ್ಲಾಡಿಸಿದ 1914–18ಮತ್ತು 1939 45ರ ಎರಡು ಮಹಾಯುದ್ಧಗಳು ಮತ್ತು ಅಕ್ಟೋಬರ್ ಸಮಾಜವಾದೀ ಕ್ರಾಂತಿಯೊಂದಿಗೆ ಆರಂಭವಾಗಿ ಕ್ರಮೇಣ ಮಾನವ ಕುಲದ ಮೂರರಲ್ಲಿ ಒಂದು ಭಾಗವನ್ನು ಆವರಿಸಿದ ಜಾಗತಿಕ ವ್ಯವಸ್ಥೆಯಾಗಿ ಸಮಾಜವಾದದ ಉದಯ ಇವುಗಳತ್ತ ಕಣ್ಣು ಮುಚ್ಚಿಕೊಳ್ಳುವ ಯಾವುದೇ ಇತಿಹಾಸ ವಿದ್ಯಾರ್ಥಿ ಆಧುನಿಕ ಯುಗದ ಸಾಮಾಜಿಕ – ರಾಜಕೀಯ ವಿದ್ಯಮಾನದ ತಲೆ–ಬುಡ ಅರ್ಥಮಾಡಿಕೊಳ್ಳಲಾರ. ಇಂತಹ ತಳ ಮಟ್ಟದ ಅಜ್ಞಾನ ಮತ್ತು ವಾಸ್ತವ ಸಂಗತಿಗಳತ್ತ ಬೇಕೆಂದೇ ಕಣ್ಣು ಮುಚ್ಚಿಕೊಳ್ಳುವುದರಿಂದಾಗಿಯೇ ಶೌರಿಯಂತಹವರು ಈ ರೀತಿಯ ದುಸ್ಸಾಹಸಕ್ಕೆ ಳಿಯುವಂತಾಗುತ್ತದೆ.

ದುರದೃಷ್ಟವಶಾತ್ ಶ್ರೀಮಾನ್ ಅರುಣ್ ಶೌರಿ ಪ್ರಥಮ ಮಹಾಯುದ್ಧ ಹೇಗೆ ಭುಗಿಲೆದ್ದಿತು, ಹೇಗೆ ಅದು ಕೊನೆಗೊಂಡಿತು ಮತ್ತು ಅದರ ಪರಿಣಾಮಗಳೇನು, ಈಸಾಮ್ರಾಜ್ಯ ಶಾಹೀ ಯುದ್ಧವನ್ನು ಕೊನೆಗೊಳಿಸುವಲ್ಲಿ ರಶಿಯನ್ ಸಮಾಜವಾದೀ ಕ್ರಾಂತಿ ಮತ್ತು ಹೊಸ ಸೋವಿಯತ್ ಪ್ರಭುತ್ವವಹಿಸಿದ ಪಾತ್ರವೇನು ಇತ್ಯಾದಿಗಳ ಬಗ್ಗೆ ಪರಿಶ್ರಮಪೂರ್ವಕ ಅಧ್ಯಯನ ನಡೆಸಬೇಕಾಗಿದೆ. ಸೋವಿಯತ್ ಪ್ರಭುತ್ವ ಜ್ಯಾರಿಗೊಳಿಸಿದ ಮೊದಲಡಿಕ್ರಿಯೆಂದರೆ ಶಾಂತಿಯಡಿಕ್ರಿ ಎಂದು ಶೌರಿಗೆ ತಿಳಿಯಪಡಿಸಿಆತನಿಗೆಶಿಕ್ಷಣ ನೀಡುವುದುಬಹುಶ ಒಂದು ಫಲದಾಯಕ ಪ್ರಯತ್ನವಾಗಬಹುದು ಅಕ್ಟೋಬರ್ ಸಮಾಜವಾದೀ ಕ್ರಾಂತಿ ಒಂದೇ ಹೊಡೆತದಲ್ಲಿ ಝಾರ್ ಶಾಹಿಯ ಸಾಮ್ರಾಜ್ಯವನ್ನು ಧ್ವಂಸಮಾಡಿ ಝಾರ್‌ಶಾಹಿಯ ಸರ್ವಾಧಿಕಾರದಡಿಯಲ್ಲಿ ಶತಮಾನಗಳಿಂದ ನರಳುತ್ತಿದ್ದ ಹಲವಾರು ದೇಶಗಳನ್ನು ಅಲ್ಪ ಸಂಖ್ಯಾತ ಜನಾಂಗಗಳನ್ನು ವಿಮೋಚನೆಗೊಳಿಸಿತು.

ಈ ಹೋರಾಟದ ಗೆಲುವು ಸಾಮ್ರಾಜ್ಯಶಾಹಿಯ ಬಿಗಿ ಹಿಡಿತವನ್ನು ದುರ್ಬಲಗೊಳಿಸಿತು, ಮತ್ತು ರಾಷ್ಟ್ರೀಯ ವಿಮೋಚನಾ ಆಂದೋಲನಗಳಿಗೆ ಸ್ಫೂರ್ತಿ ಮತ್ತು ಬೆಂಬಲದ ಸೆಲೆಯಾಗಿತ್ತದು. 1917 ರಿಂದೀಚೆಗಿನ ದಶಕಗಳಲ್ಲಿ ಕೂಡಾ ಸಮಾಜವಾದೀ ಜಗತ್ತು ತನ್ನ ಈ ಔನ್ನತ್ಯವನ್ನು ಕಳಕೊಂಡಿಲ್ಲ ಶಾಂತಿ, ರಾಷ್ಟ್ರೀಯ ಸ್ವಾತಂತ್ರ್ಯ ಮತ್ತು ಸಮಾಜವಾದವನ್ನು ಮೇಲಕ್ಕೆತ್ತಿ ಹಿಡಿದಿರುವುದಕ್ಕಾಗಿ ಜಾಗತಿಕ ಸಾಮ್ರಾಜ್ಯಶಾಹಿಯ ನೇರವಾದ ಮತ್ತು ವಿಷಪೂರಿತವಾದ ಹಲ್ಲೆಯನ್ನು ಎದುರಿಸುತ್ತಿರುವ ಪ್ರಥಮ ಸಮಾಜವಾದೀ ಪ್ರಜಾಪ್ರಭುತ್ವವನ್ನು ಬಲಪಡಿಸುವುದು ಮತ್ತು ರಕ್ಷಿಸುವುದು ಶ್ರೀಮಾನ್ ಶೌರಿಯ "ಇತಿಹಾಸ" ನಂಬಿಸ ಬಯಸುವಂತೆ ಯುದ್ಧದ ಮೂಲಕಾರಣವಾಗಲೀ ಅಥವಾ ಗರಿಗೂಡಿಸಿಕೊಳ್ಳುತ್ತಿದ್ದ ರಾಷ್ಟ್ರೀಯ ವಿಮೋಚನಾ ಆಂದೋಲನಗಳಿಗೆ ಬಗೆಯುವ ವಿಶ್ವಾಸಘಾತವಾಗಲೀ ಅಲ್ಲ ಜಗತ್ತಿನ ಪುನರ್ವಿಂಗಡನೆಗಾಗಿ ಯುದ್ಧ ತಯಾರಿಗಳನ್ನು ಆರಂಭಿಸಿದ್ದು 20ರ ದಶಕದ ಕೊನೆಯಲ್ಲಿ ಮತ್ತು 30ರ ದಶಕದ ಆರಂಭದಲ್ಲಿ ಗಂಭೀರ ಆರ್ಥಿಕ ಬಿಕ್ಕಟ್ಟನ್ನು ಎದುರಿಸುತ್ತಿದ್ದ ಸಾಮ್ರಾಜ್ಯಶಾಹೀ ಸೋವಿಯತ್ ಸಂಘ ಕಮ್ಯೂನಿಸ್ಟ್ ಪಕ್ಷದ (ಸಿ ಪಿ ಎಸ್ ಯು) ದ ಹದಿನೇಳನೇ ಅಧಿವೇಶನಕ್ಕೆ ಇತ್ತ ಪ್ರಧಾನ ಕಾರ್ಯದರ್ಶಿಯವರ ವರದಿ 1934ರ ಜನವರಿಯಲ್ಲೇ ಹೊಸ ಜಾಗತಿಕ ಯುದ್ಧಕ್ಕೆ ಆಗಲೇ ತಯಾರಿ ನಡೆದಿದೆಯೆಂದು ಸ್ಪಷ್ಟವಾಗಿ ಹೇಳಿದೆ.–

" ಚೀನಾದ ವಿರುದ್ಧ ಜಪಾನಿನ ಯುದ್ಧ, ಮಂಚೂರಿಯಾದ ಆಕ್ರಮಣ ಲೀಗ್ ಆಫ್ ನೇಶನ್ಸ್ ನಿಂದ ಜಪಾನ್ ಹೊರ ಬಂದಿರುವುದು ಮತ್ತು ಉತ್ತರ ಚೀನಾದೊಳಗೆ ಮುಂದೊತ್ತಿರುವುದು ಇವೆಲ್ಲಾ ಸ್ಥಿತಿಯನ್ನು ಮತ್ತಷ್ಟು ಗಂಭೀರಗೊಳಿಸಿದೆ ಫೆಸಿಫಿಕ್‌ಗಾಗಿ ಹೋರಾಟ ತೀವ್ರಗೊಂಡು, ಜಪಾನ್ ಅಮೇರಿಕಾಸಂಸ್ಥಾನ, ಗ್ರೇಟ್ ಬ್ರಿಟನ್ ಮತ್ತು ಜಪಾನಿನಲ್ಲಿ ನಾವಿಕ ಶಸ್ತ್ರಪಡೆಗಳ ಹೆಚ್ಚಳ ಇದರದೇ ಫಲಿತಾಂಶ. ಲೀಗ್ ಆಫ್ ನೇಶನ್ಸ್‌ನಿಂದ ಜರ್ಮನಿ ಹೊರ ಬಂದಿರುವುದು ಮತ್ತು ರೆವಾಂಚಿಸಂನ ಪ್ರೇತಭಯ ಸ್ಥಿತಿಯ ಗಂಭೀರತೆಯನ್ನು ಮತ್ತಷ್ಟು ಹೆಚ್ಚಿಸಿ ಯುರೋಪ್ ಶಸ್ತ್ರಾಸ್ತ್ರಗಳ ಹೆಚ್ಚಳಕ್ಕೆ ಹೊಸ ಒತ್ತಾಸೆ ನೀಡಿದೆ.

1914ರಲ್ಲಾದಂತೆ ಮತ್ತೊಮ್ಮೆ ಯುದ್ಧಕೋರ ಸಾಮ್ರಾಜ್ಯವಾದೀ ಪಕ್ಷಗಳು ಮತ್ತು ಯುದ್ಧ ಹಾಗೂ ರೇವಾಂಚಿಸಂನ ಪಕ್ಷಗಳು ರಂಗದ ಮೇಲೆ ಬರುತ್ತಿವೆ.

ಸ್ಥಿತಿ ಒಂದು ಹೊಸ ಯುದ್ಧದತ್ತ ಧಾವಿಸುತ್ತಿದೆ ಎಂಬುದು ಏಕ್‌ದಂ ಸ್ಪಷ್ಟ

ಪುನಃ 1939ರ ಮಾರ್ಚ್ 10 ರಂದು ಸಿ. ಪಿ. ಎಸ್. ಯು ನ 18ನೇ ಅಧಿವೇಶನಕ್ಕೆ ಸಲ್ಲಿಸಿದ ಪ್ರಧಾನ ಕಾರ್ಯದರ್ಶಿಯ ವರದಿಯ ಹೇಳಿಕೆಯೂ ಸ್ಪಷ್ಟವಾಗಿದೆ. "ಒಂದು ಹೊಸ ಸಾಮ್ರಾಜ್ಯಶಾಹೀ ಯುದ್ಧ ಶಾಂಘಯಿಂದ ಜಿಬ್ರಾಲ್ಟರ್‌ನವರೆಗಿನ ಅಪಾರ ಕ್ಷೇತ್ರವನ್ನಾವರಿಸಿರುವ 50 ಕೋಟಿ ಜನತೆಯನ್ನೊಳಗೊಂಡಿರುವ ಯುದ್ಧ ಆಗಲೇ ಎರಡನೇ ವರ್ಷಕ್ಕೆ ಕಾಲಿಟ್ಟಿದೆ. ಯುರೋಪ್, ಆಫ್ರಿಕಾ ಮತ್ತು ಏಷ್ಯಾದ ನಕಾಶೆಯನ್ನು ಬಲ ಪ್ರಯೋಗದಿಂದ ಪುನಃ ಬಿಡಿಸಲಾಗುತ್ತಿದೆ. ಸಮಸ್ತ ಯುದ್ಧೋತ್ತರ ವ್ಯವಸ್ಥೆ, ಶಾಂತಿ ಆಡಳಿತ ಎಂದೆನಿಸಿಕೊಂಡ ವ್ಯವಸ್ಥೆ ಬುಡದಿಂದ ಅಲುಗಾತ್ತಿದೆ"

1032ರ ಮಾರ್ಚ್‌ನಲ್ಲಿ ಮಂಚೂರಿಯಾವನ್ನು ಆಕ್ರಮಿಸಿಕೊಂಡದ್ದು, ನಾಝೀ ಜರ್ಮನಿ ಸ್ಪೆಯಿನ್‌ನಲ್ಲಿ ಅಂತಯುರ್ದ್ಧಕ್ಕೆ ಕುಮ್ಮಕ್ಕು ನೀಡಿದ್ದು, ರಿಪಬ್ಲಿಕನ್ ಸ್ಪಾನಿಷ್ ಸರಕಾರದ ವಿರುದ್ಧ ಜನರಲ್ ಫ್ರಾಂಕೋನ ಪ್ರತಿಕ್ರಿಯಾವಾದೀ ಸೇನೆಗಳಿಗೆ ಫ್ಯಾಸಿಸ್ ಇಟಲಿ ಶಸ್ತ್ರ ನೆರವು ನೀಡಿದ್ದ, 1935ರಲ್ಲಿ ಫ್ಯಾಸಿಸ್ಟ್ ಇಟಲಿಯಿಂದ ಇಥಿಯೋಪಿಯಾದ ಅತಿಕ್ರಮಣ, ಜರ್ಮನ್-ಇಟಲಿ–ಜಪಾನೀ ಫ್ಯಾಸಿಸ್ಟ್ ಕೂಟದ ಆವೇಶಪೂರ್ಣ ಯುದ್ಧ ತಯಾರಿ, ಅದಕ್ಕೆ ಅನುವುಮಾಡಿಕೊಟ್ಟ ಬ್ರಿಟಿಷ್ ಅಮೇರಿಕನ್ ಮತ್ತು ಫ್ರೆಂಚ್ ಸಾಮ್ರಾಜ್ಯಶಾಹಿಗಳ ತಪ್ಪು ಸುರಿಯುವ ಧೋರಣೆ ಈ ಎಲ್ಲಾ ವಾಸ್ತವ ವಾಸ್ತವ ಸಂಗತಿಗಳು ಪಂಜ್ಞಾನ ಹೊಸದಾಗಿ ನೇಮಕಗೊಂಡ "ಚಾರಿತ್ರಿಕ" ಸಂಶೋಧಕ ಅರುಣ್‌ಶೌರಿಗೆ ಏನೇನೂ ಇಲ್ಲ.

> ಶಾಂತಿ, ರಾಷ್ಟ್ರೀಯ ಸ್ವಾತಂತ್ರ್ಯ ಮತ್ತು ಸಮಾಜವಾದವನ್ನು ಮೇಲಕ್ಕೆತ್ತಿ ಹಿಡಿದಿರುವುದಕ್ಕಾಗಿ ಜಾಗತಿಕ ಸಾಮ್ರಾಜ್ಯಶಾಹಿಯ ನೇರವಾದ ಮತ್ತು ವಿಷಪೂರಿತವಾದ ಹಲ್ಲೆಯನ್ನು ಎದುರಿಸುತ್ತಿರುವ ಪ್ರಥಮ ಸಮಾಜವಾದೀ ಪ್ರಜಾಪ್ರಭುತ್ವವನ್ನು ಬಲಪಡಿಸುವುದು ಮತ್ತು ರಕ್ಷಿಸುವುದು, ಶ್ರೀಮಾನ್ ಶೌರಿಯ "ಇತಿಹಾಸ" ನಂಬಿಸ ಬಯಸುವಂತೆ ಯುದ್ಧದ ಮೂಲ ಕಾರಣವಾಗಲೀ ಅಥವಾ ಗರಿ ಗೂಡಿಸಿಕೊಳ್ಳುತ್ತಿದ್ದ ರಾಷ್ಟ್ರೀಯ ವಿಮೋಚನಾ ಆಂದೋಲನಗಳಿಗೆ ಬಗೆಯುವ ವಿಶ್ವಾಸಘಾತವಾಗಲೀ ಅಲ್ಲ.

1938ರ ಸೆಪ್ಟಂಬರ್ 29 ರಂದೇ ಬ್ರಿಟನ್ ಫ್ರಾನ್ಸ್ ಜರ್ಮನಿ ಹಾಗೂ ಇಟಲಿಯ ಸರಕಾರದ ಮುಖ್ಯಸ್ಥರು, ಮ್ಯೂನಿಚ್‌ನಲ್ಲಿ ಸಭೆಸೇರಿ ಜೆಕೋಸ್ಲೊವಾಕಿಯಾವನ್ನು ಒಡೆದು ಚೂರಾಗಿಸಿ, ಒಂದು ತುಣುಕನ್ನು ಹಿಟ್ಲರನ ಜರ್ಮನಿಗೆ ಕೊಡಲುನಿರ್ಧರಿಸಿದ್ದರು ಎಂಬುದು ಶೌರಿಗೆ ತಿಳಿದಿಲ್ಲ.

ಆಂಗ್ಲ ಫ್ರೆಂಚ್ ಮತ್ತು ಅಮೇರಿಕನ್ ಸಾಮ್ರಾಜ್ಯ ಶಾಹೀ ಬಣ ಅಕ್ಷ ಕೂಟಕ್ಕೆ (**AXIS POWERS** ಜರ್ಮನಿ - ಇಟಲಿ - ಜಪಾನೀ ಬಣ) ಕುಮ್ಮಕ್ಕು ನೀಡುತ್ತಿತ್ತು ಎಂಬ ವಾಸ್ತವತೆಯ ಅರಿವು ಸಹಜವಾಗಿಯೇ ಆತನಿಗಿಲ್ಲ.

ಶೌರಿ ತನ್ನ ಇತಿಹಾಸದ ಪತ್ಯ ಪುಸ್ತಕಗಳನ್ನು ಓದಿಕೊಳ್ಳಲಿ. ಆಗ 1933 ರಷ್ಟು ಮುಂಚೆನೇ ರಿವಾಂಚಿಸ್ಟ್ ಜರ್ಮನಿ ಮತ್ತು ಫ್ಯಾಸಿಸ್ಟ್ ಇಟಲಿಯ ಯುದ್ಧ ಸಿದ್ಧತೆಗಳನ್ನು ಕಂಗಿಕಗೊಳಿಸಿ ಸಾಮೂಹಿಕ ಭದ್ರತೆ ಕಾಪಾಡಲು ಒಂದು ಬಹುಪಕ್ಷೀಯ ಭದ್ರತಾ ಸಂಧಿಯ ಪ್ರಸ್ತಾಪವನ್ನು ಸೋವಿಯೆತ್ ಸಂಘ ಮಂಡಿಸಿತ್ತು ಎಂಬುದು ಆತನಿಗೆ ತಿಳಿಯುತ್ತದೆ. ಮಿತ್ರಕೂಟದ ದೇಶಗಳು ಈ ಆಹ್ವಾನವನ್ನು ಕೇವಲ ಉಪಚಾರದ ಮಾತನಾಡಿ ತಳ್ಳಿ ಹಾಕಿದರು ಮತ್ತು ಅದನ್ನು ಬುಡಮೇಲು ಮಾಡಿದರು.

ಜಾಗತಿಕ ಸಾಮ್ರಾಜ್ಯಶಾಹಿ ದರೋಡೆಕೋರರು ಎರಡನೇ ಮಹಾಯುದ್ಧದ ಮೊದಲು ನಿಶಸ್ತ್ರೀಕರಣ ಮತ್ತು ಶಾಂತಿಯ ಎಲಾ ಸೋವಿಯತ್ ಪ್ರಸ್ತಾಪಗಳನ್ನು ಏಕೆ ತಿರಸ್ಕರಿಸಿದರು ? ಇದರ ಹಿಂದಿನ ತರ್ಕವನ್ನು ಅಮೇರಿಕನ್ ಸರಕಾರದ ಸಂಪತ್ತಿನದಾಖಲೆಗಳಿಂದ ತಿಳಿಯಬಹುದು. ಸೋವಿಯತ್ ಆಹ್ವಾನಗಳನ್ನು ತಿರಸ್ಕರಿಸುವ ವಿಚಾರವನ್ನು ನಿಸ್ಸಂದಿಗ್ಧ ಸ್ವರೂಪದಲ್ಲಿ ರೂಪಿಸಿದವರು ಸೆನೇಟರ್ ಹ್ಯಾರಿ ಟ್ರೂಮನ್. ಈತ ಮುಂದೆ ಅಮೇರಿಕಾದ ಉಪಾಧ್ಯಕ್ಷ ಮತ್ತು ನಂತರ ಅಧ್ಯಕ್ಷರೂ ಆದರು. ಸೋವಿಯತ್ ಸಂಘದ ಮೇಲೆ ನಾಝೀ ಜರ್ಮನಿಯ ಆಕ್ರಮಣದ ಮರು ದಿನ ಪತ್ರಿಕಾ ಹೇಳಿಕೆಯೊಂದರಲ್ಲಿ ಆತ ಹೀಗೆ ಹೇಳಿದ್ದರು. — "ಜರ್ಮನಿ ಗೆಲ್ಲುವಂತೆ ಕಂಡು ಬಂದರೆ ನಾವು ರಷ್ಯಾಕ್ಕೆ ಸಹಾಯಮಾಡಬೇಕು. ರಷ್ಯಾ ಗೆಲ್ಲುವಂತೆ ಕಂಡು ಬಂದರೆ ನಾವು ಜರ್ಮನಿಗೆ ಸಹಾಯ ಮಾಡಬೇಕು. ಈ ರೀತಿ ಇಬ್ಬರೂ ಎಷ್ಟು ಸಾಧ್ಯವೋ ಅಷ್ಟು ಮಂದಿಯನ್ನು ಕೊಂದು ಕೊಳ್ಳಲಿ." ಆತನ ಸಹಯೋಗಿ ಸೆನೇಟರ್ ರಾಬರ್ಟ್ ಟಾಫ್ಟ್‌ನ ಮಾತುಗಳು ಇನ್ನೂ ನೇರವಾಗಿವೆ — "ಅಮೇರಿಕಾ ಸಂಯುಕ್ತ ಸಂಸ್ಥಾನ ಹಿಟ್ಲರ್‌ನ ಗೆಲುವನ್ನು ಇಚ್ಛಿಸುತ್ತದೆ."

ಹೀಗಿದ್ದವು ಸೋವಿಯತ್ ರಷ್ಯಾವನ್ನು ಧ್ವಂಸ ಗೊಳಿಸುವ ಜಾಗತಿಕ ಸಾಮ್ರಾಜ್ಯ ಶಾಹಿಯ ನಿರ್ದಯ ದುರುದ್ದೇಶ ಪೂರ್ಣ ಯೋಜನೆಗಳು. ಹಿಟ್ಲರ್ ಜರ್ಮನಿ ಮತ್ತು ಸೋವಿಯತ್ ಸಂಘಗಳ ನಡುವಿನ ಅನಾಕ್ರಮಣ ಸಂಧಿ ಸೋವಿಯತ್ ಸಂಘ ಮತ್ತು ಬಂಡವಾಳಶಾಹಿ ಪ್ರಜಾಪ್ರಭುತ್ವಗಳನ್ನು ಫಾಸಿಸಂನಿಂದ ರಕ್ಷಿಸಲು ಕೈಗೊಂಡ ಮುನ್ನೆಚ್ಚರಿಕೆ ಕ್ರಮಗಳ ಸರಣಿಯಲ್ಲಿ ಒಂದು ಚಾರಿತ್ರಿಕ ಕ್ರಮ. ಸಾಮ್ರಾಜ್ಯಶಾಹಿಗಳ ಉದ್ದೇಶ ಸ್ಪಷ್ಟವಾದಾಗಲಷ್ಟೇ ಸೋವಿಯತ್ ಸಂಘವನ್ನು ಸುತ್ತುವರಿಯುವ ಸಾಮ್ರಾಜ್ಯಶಾಹೀ ಕುತಂತ್ರಗಳ ಪರಿಣಾಮಗಳಿಂದ ತಪ್ಪಿಸಿಕೊಳ್ಳಲಷ್ಟೆ ಸೋವಿಯತ್ ಸಂಘ ಈ ಅನಾಕ್ರಮಣ ಸಂಧಿ ಮಾಡಿಕೊಂಡದ್ದು.

ಇದಕ್ಕೆ ತದ್ವಿರುದ್ಧವಾಗಿ, ಶೌರಿಗೆ ಐತಿಹಾಸಿಕ ಘಟನೆಗಳು ಔತಣಕೂಟದ ಸಂಭಾಷಣೆಯ ರೀತಿಯಲ್ಲಿ ಸಜ್ಜುಗೊಳಿಸಲ್ಪಟ್ಟ ಸಂಗತಿಗಳು. ಶ್ರೀಮಾನ್ ಶೌರಿಯ ಪ್ರಕಾರ, ಆತನ ಮಾತುಗಳಲ್ಲೇ ಹೇಳುವುದಾದರೆ, ಆ ಮಹಾನ್ ಕೆಡುಕಿನ ಆರಂಭ ಫ್ಯಾಸಿಸ್ಟ್ ಜರ್ಮನಿ ಮತ್ತು ಸೋವಿಯತ್ ಸಂಘಗಳ ನಡುವಿನ ಅನಾಕ್ರಮಣ ಸಂಧಿಗೆ ಸಹಿ ಹಾಕುವುದರೊಂದಿಗೆ. ಆತನ ಮಾತುಗಳು ಇವು "1939ರ ಆಗಸ್ಟ್ 23 ರಂದು ಸರಸ – ಸೌಜನ್ಯ ಹಾಗೂ ಸ್ವಸ್ತಿಪಾನಗಳ ನಡುವೆ ಸೋವಿಯತ್ ಸಂಘ ಹಿಟ್ಲರ್‌ನೊಂದಿಗೆ ಒಂದು ಸಂಧಿ ಏರ್ಪಡಿಸಿಕೊಂಡಿತು. ಅನಾಕ್ರಮಣ ಸಂಧಿ ಎಂದು ಇದನ್ನು ಕರೆಯಲಾಯಿತು.

ತನ್ನ ಪೂರ್ವದ ಗಡಿಯನ್ನು ಭದ್ರಪಡಿಸಿಕೊಂಡು, ಒಂದು ವಾರದೊಳಗೇ ಹಿಟ್ಲರ್ ಪೋಲೆಂಡ್‌ನೊಳಗೆ ಅತಿಕ್ರಮಣ ನಡೆಸಿದ. . . ಸೆಪ್ಟಂಬರ್ 3 ರಂದು ಬ್ರಿಟನ್ ಮತ್ತು ಫ್ರಾನ್ಸ್ ಜರ್ಮನಿ ವಿರುದ್ಧ ಯುದ್ಧ ಘೋಷಿಸಿದವು." ಎರಡನೇ ಮಹಾಯುದ್ಧ ಆರಂಭಗೊಂಡದ್ದು ಹೀಗೆ !

ಜರ್ಮನಿ ಆಸ್ಟ್ರಿಯಾ ಮತ್ತು ಜೆಕೋಸ್ಲೋವಾಕಿಯವನ್ನು ಅತಿಕ್ರಮಿಸಿಕೊಂಡುದನ್ನು ನಿರ್ಲಕ್ಷಿಸಿ ಅನಾಕ್ರಮಣ ಒಪ್ಪಂದದ ಆರೋಪಿನ ಮೇಲೆ ಹಿಟ್ಲರ್‌ನ ಆಕ್ರಮಣಕ್ಕೆ ಕಾರಣ ಎನ್ನುವ ಈತ ಯಾವ ರೀತಿಯ ಚಾರಿತ್ರಿಕ ಸಂಶೋಧಕ ? ಟ್ರೂಮನ್, ಚಾಫ್ಟ್, ಟ್ರೈಮ್‌ನ ಸಂಪಾದಕ ಮತ್ತು ಕುನಾರ್ಡ್ ಬಳಗದ ಗುಂಪಿಗೆ ಸೇರುವ ಹೆರ್ ಶೌರಿ (ಜರ್ಮನ್ ಭಾಷೆಯಲ್ಲಿ ಹೆರ್ = ಶ್ರೀಮಾನ್ – ಉದಾ : ಹೆರ್ ಹಿಟ್ಲರ್) ಗೆ ಚೇಂಬರ್ ಲೇನ್ – ಡಲಾಡಿಮರ್ ಮತ್ತು ಬಳಗ ಹಾಗೂ ಜರ್ಮನ್, ಜಪಾನೀ ಹಾಗೂ ಇಟಲಿಯನ್ ಫ್ಯಾಸಿಸ್ಟ್ ಕೂಟಗಳ ನಡುವೆ ಒಂದು ಸಂಧಿ ನಡೆಯುವುದು ಹೆಚ್ಚು ಇಷ್ಟವಾದ ವಿಷಯ. ಇಂತಹದೊಂದು ಸಂಧಿ ಏರ್ಪಟ್ಟಿದ್ದರೆ ಅದು ಸಮಾಜವಾದದ ಮತ್ತು ರಾಷ್ಟ್ರೀಯವಾದೀ ಆಂದೋಲನದ ಆಕಾಂಕ್ಷೆಗಳನ್ನು ನಾಶ ಮಾಡಿಬಿಡುತ್ತಿತ್ತು.

[ಮುಂದುವರಿಯುತ್ತದೆ]

ರೈತ ಕಾರ್ಮಿಕರ ಐಕ್ಯ ಹೋರಾಟದಲ್ಲಿ ಬೀಡಿ ಕಾರ್ಮಿಕರ ಪಾತ್ರ

ನಮ್ಮ ರಾಜ್ಯದಲ್ಲಿ ಈ ಹಿಂದೆ ನಡೆದಿರುವ ರೈತರ ಹೋರಾಟಕ್ಕೆ ಭುಜಕ್ಕೆ ಭುಜ ಕೊಟ್ಟು ನಮ್ಮ ಬೀಡಿ ಕಾರ್ಮಿಕರು ರಾಜ್ಯಾದ್ಯಂತ ಹೋರಾಡಿದ ಒಂದು ಇತಿಹಾಸವೇ ಇದೆ.

ಈಗ ಮತ್ತೆ ವ್ಯವಸಾಯ ಕೂಲಿಗಾರರ ಕನಿಷ್ಠ ಕೂಲಿ ನಿರ್ಣಯ, ನಿವೇಶನರಹಿತರಿಗೆ ಮನೆ ನಿವೇಶನ, ಬಡ ರೈತರೂ, ಭೂಹೀನ ಕೃಷಿ ಕೂಲಿಗಾರರೂ ಸರ್ಕಾರದ ಭೂಮಿಗಳಲ್ಲಿ ಹತ್ತಾರು ವರ್ಷದಿಂದ ವ್ಯವಸಾಯ ಮಾಡುತ್ತಿದ್ದರೂ ಅರಣ್ಯ ಮತ್ತು ತೋಟಗಾರಿಕೆ ಇಲಾಖೆಯಿಂದ ಒಕ್ಕಲೆಬ್ಬಿಸಲು ಕೊಟ್ಟಿರುವ ನೋಟೀಸ್‌ಗಳನ್ನು ರದ್ದು ಮಾಡಿ ಈ ಕೂಡಲೇ ಆಯಾ ಭೂಮಿಯನ್ನು ಉಳುಮೆ ಮಾಡುವವರಿಗೇ ಪಟ್ಟಾ ಕೊಡಬೇಕೆಂದೂ ದಿನಾಂಕ 11–6–84 ರಂದು ರಾಜ್ಯಾದ್ಯಂತ ಸರ್ಕಾರದ ಕಚೇರಿಗಳ ಮುಂದೆ ಪಿಕೆಟಿಂಗ್ ಮಾಡಬೇಕೆಂದು ಅಖಿಲ ಭಾರತ ಕಿಸಾನ್ ಸಭೆಗೆ ಸಂಬಂಧಪಟ್ಟ ರಾಜ್ಯ ರೈತಸಂಘ ಕೊಟ್ಟಿರುವ ಕರೆ ಯಶಸ್ವಿಗೊಳಿಸಲು ರಾಜ್ಯಾದ್ಯಂತ ಬೀಡಿ ಕಾರ್ಮಿಕರು ಈ ಹೋರಾಟದಲ್ಲಿ ಹಿಂದಿನಂತೆ, ಪಾಲುಗೊಳ್ಳಲು ಮಂಗಳೂರಿನಲ್ಲಿ ನಡೆದ ರಾಜ್ಯ "ಸಿ. ಐ. ಟಿ. ಯು." ನಾಲ್ಕನೇ ಸಮ್ಮೇಳನದ ವೇದಿಕೆಯಿಂದ ಕೊಟ್ಟ ಕರೆಗೆ ಓಗೊಟ್ಟು ಬಡ ರೈತರ ಹೋರಾಟವನ್ನು ಯಶಸ್ವಿಗೊಳಿಸುವ ಮುಖಾಂತರ, ರೈತ, ಕಾರ್ಮಿಕ ಐಕ್ಯತೆಯನ್ನು ಬೆಳೆಸಲು ಈ ಸದಾವಕಾಶದ ಮಹತ್ವವನ್ನು ಬೀಡಿ ಕಾರ್ಮಿಕರು ಗಮನಿಸಿ ಜೊತೆಗೆ ರಾಜ್ಯದಲ್ಲಿ ಸುಮಾರು 6 ಲಕ್ಷ ಬೀಡಿ ಕಾರ್ಮಿಕರಿದ್ದು ಬೀಡಿ ಕೈಗಾರಿಕೆಯಲ್ಲಿ ಕಾಂಟ್ರಾಕ್ಟ್ ಪದ್ಧತಿ ರದ್ದಾಗಬೇಕು, ಅವರು ಎಲ್ಲಿಯೇ ಬೀಡಿ ಕಟ್ಟುತ್ತಿದ್ದರೂ ಕಾರ್ಮಿಕರೆಂದು ಪರಿಗಣಿಸಲ್ಪಟ್ಟು ಎಲ್ಲಾ ಸವಲತ್ತುಗಳೂ ಸಿಕ್ಕಬೇಕು. ಮೇ ದಿನದ ರಜೆಯನ್ನು ಸಂಬಳ ಸಹಿತ ರಜೆಯನ್ನಾಗಿ ಕೊಡಬೇಕು.

ಲೇಬಲ್ ಇಲ್ಲದ ಬೀಡಿ ತಯಾರಿಕೆಗೆ ಈಗ ಇರುವ ರಿಯಾಯಿತಿ ರದ್ದಾಗಬೇಕು. ಟ್ರೇಡ್ ಮಾರ್ಕ್ ಹೊಂದಿರುವವರಿಗೆ ಮಾತ್ರವೇ ಬೀಡಿ ತಯಾರಿಕೆಯ ಲೈಸನ್ಸ್ ಕೊಡಬೇಕು. ಬೀಡಿ ಕಾರ್ಮಿಕರ ಕ್ಷೇಮನಿಧಿಯಿಂದ ನಡೆಸುವ ಸುಸಜ್ಜಿತ, ಸುವ್ಯವಸ್ಥಿತ ಸಂಚಾರಿ ಆಸ್ಪತ್ರೆಗಳು ರಾಜ್ಯಾದ್ಯಂತ ವ್ಯವಸ್ಥೆ ಆಗಬೇಕು. ಮಂಗಳೂರಿನಲ್ಲಿ ಬೀಡಿ ಕಾರ್ಮಿಕರಿಗೆ ನೂರು ಹಾಸಿಗೆಗಳ ಆಸ್ಪತ್ರೆಯೊಂದನ್ನು ತೆರೆಯಬೇಕು. ಕನಿಷ್ಠ ಅಂಕಗಳ ಮತ್ತು ಆದಾಯದ ಮಿತಿಯನ್ನು ಹೇರದೆ ಬೀಡಿ ಕಾರ್ಮಿಕರ ಮಕ್ಕಳಿಗೆ ವಿದ್ಯಾರ್ಥಿ ವೇತನ ಸಿಕ್ಕಬೇಕು. ಬೀಡಿ ಕಾರ್ಮಿಕರಿಗೆ ಉಚಿತವಾಗಿ ಮನೆ ನಿವೇಶನ ಒದಗಿಸಬೇಕು ಮತ್ತು ಮನೆ ಕಟ್ಟಲು ಸಾಲ ಹಾಗೂ ಸಬ್ಸಿಡಿ ಕೊಡಬೇಕು ಎಂಬ ಬೇಡಿಕೆಗಳ ಸಲುವಾಗಿ-

ರಾಜ್ಯದ ಬೀಡಿ ಕಾರ್ಮಿಕರು ದಿನಾಂಕ 11–6–84 ರಂದು ನಡೆಯುವ ಬಡ ರೈತರ ಪಿಕೆಟಿಂಗ್ ಹೋರಾಟದಲ್ಲಿ ತಮ್ಮ ಬೇಡಿಕೆಗಳ ಸಮೇತ ಬೀಡಿ ಕಾರ್ಮಿಕರು ಪಾಲ್ಗೊಳ್ಳಲು ರಾಜ್ಯ ಬೀಡಿ ಕಾರ್ಮಿಕರ ಫೆಡರೇಷನ್ ಕರೆ ಕೊಡುತ್ತದೆ.

ಮಹಮ್ಮದ ದಸ್ತಗೀರ್
ಪ್ರಧಾನ ಕಾರ್ಯದರ್ಶಿ
ಕರ್ನಾಟಕ ರಾಜ್ಯ ಬೀಡಿ ಕೆಲಸಗಾರರ ಫೆಡರೇಶನ್

ಪ್ರಥಮ ಗೆಲುವು

ಬೆಟ್ಟಗೇರಿ ನಾಲ್ಕ್ನಾಡ್ ರಸ್ತೆ ಕೆಲಸಗಾರನಾಗಿದ್ದು ನಿವೃತ್ತಿ ಹೊಂದಿದ್ದ ಶ್ರೀ ನಂಜುಂಡ ಎಂಬುವವರಿಗೆ ಲೋಕೋಪಯೋಗಿ ಇಲಾಖೆಯು ಸುಪ್ರೀಂ ಕೋರ್ಟಿನ ಆದೇಶದಂತೆ ಗ್ರಾಚ್ಯುಟಿ 2610-00 ಅನ್ನು ಕೊಡಬೇಕಾಗಿ ಪೇಮೆಂಟ್ ಆಫ್ ಗ್ರಾಚ್ಯುಟಿ ಆಕ್ಟಿನನ್ವಯ ಹಾಸನ ಗ್ರಾಚ್ಯುಟಿ ಕೋರ್ಟ್ ಕಂಟ್ರೋಲಿಂಗ್ ನ್ಯಾಯಾಧೀಶರು ಹುಕುಂ ನೀಡಿದ್ದಾರೆ. ರೋಡ್ ಗ್ಯಾಂಗ್‌ಮೆನ್‌ಗಳಿಗೆ ಗ್ರಾಚ್ಯುಟಿ ನೀಡಿಕೆ ಇದು ಪ್ರಥಮ ಬಾರಿಯಾಗಿದೆ. ಇಷ್ಟರವರೆಗೆ ಅವರು ದುಡಿದು ನಿವೃತ್ತರಾಗುವಾಗ್ಗೆ ಏನನ್ನೂ ಸರ್ವಿಸ್‌ಗನುಸರಿಸಿ ಕೊಡುತ್ತಿಲ್ಲ. ಕೊಡಗು ಜಿಲ್ಲಾ ಜನರಲ್ ವರ್ಕರ್ಸ್ ಯೂನಿಯನ್ ವಿರಾಜಪೇಟೆ ಕೆಲಸಗಾರರನ್ನು ಪ್ರತಿನಿಧಿಕರಿಸಿತ್ತು.

ತ್ರಿಪುರದಲ್ಲಿ ಕನಿಷ್ಟ ವೇತನ ಜ್ಯಾರಿ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ಮುಖಂಡತ್ವದ ತ್ರಿಪುರಾ ಎಡರಂಗ ಸರಕಾರ ತನ್ನ ರಾಜ್ಯದ ವಿವಿಧ ಶಾಖೆಗಳಲ್ಲಿ ದುಡಿಯುತ್ತಿರುವ ಕೆಲಸಗಾರರಿಗೆ ಪ್ರತಿ ದಿನ ರೂ 10 ನಿರ್ಧರಿಸಿದೆ. ಏಪ್ರಿಲ್ 1 ರಿಂದಲೇ ಅದು ಜಾರಿಯಲ್ಲಿ ಬರುತ್ತದೆ ಇದರ ಪ್ರಕಾರ 2 ಕೆ. ಜಿ. ಅಕ್ಕಿ ಮತ್ತು ರೂ 5·80 ಕೊಡಲಾಗುವುದು.

ಇದೇ ಪ್ರಕಾರ ಕೃಷಿ ಕೂಲಿಗಾರರಿಗೆ ರೂ 10 ದಿನಗೂಲಿ ನಿರ್ಧರಿಸಿ, ಎಲ್ಲರಿಗೂ ಇದರ ಲಾಭ ಸಿಗುವಂತೆ ಮಾಡಿದೆ.

ರೈತ ಹೋರಾಟಕ್ಕೆ ಬೆಂಬಲ

ಬೆಂಗಳೂರು—

ಸಿ. ಪಿ. ಐ. (ಎಂ) ಶ್ರೀರಾಮಪುರ ಸಮಿತಿಯ ಆಶ್ರಯದಲ್ಲಿ ಜೂನ್ 3 ರಂದು ಲಕ್ಷ್ಮೀನಾರಾಯಣಪುರದಲ್ಲಿ ಬಹಿರಂಗ ಸಭೆ ನಡೆದು ಜೂನ್ 11 ರಂದು ನಡೆಯುವ ರೈತರ ಹೋರಾಟಕ್ಕೆ ಬೆಂಬಲ ನೀಡಲು ಕಾರ್ಮಿಕರಿಗೆ ವಿನಂತಿಸಲಾಯಿತು. ಪಿ. ಕೆ. ಸುಬ್ರಮಣಿ, ರಮೇಶ, ಜಗನ್ನಾಥ, ಸೂರ್ಯನಾರಾಯಣರಾವ್ ಮೊದಲಾದವರು ಭಾಷಣ ಮಾಡಿದರು.

ಮಂಗಳೂರು

ಜೂನ್ 11 ರಂದು ನಡೆಯುವ ರೈತರ ಹೋರಾಟಕ್ಕೆ ಬೆಂಬಲ ನೀಡಲು ಹಾಗೂ ಬೀಡಿ ಕಾರ್ಮಿಕರ ಬೇಡಿಕೆಗಳ ಕುರಿತು ಸರಕಾರದ ಮೇಲೆ ಒತ್ತಾಯ ತರಲು ಒಂದು ದಿನದ ಸಾರ್ವತ್ರಿಕ ಮುಷ್ಕರ ಹೂಡಿ ಜಿಲ್ಲಾಧಿಕಾರಿ ಕಚೇರಿ ಮುಂದೆ ಪಿಕೇಟಿಂಗ್ ಮಾಡುವಂತೆ ಜಿಲ್ಲೆಯ ಬೀಡಿ ಕಾರ್ಮಿಕರಿಗೆ, ಯು. ಬಿ ಲೋಕಯ್ಯನವರು ವಿನಂತಿ ಮಾಡಿಕೊಂಡಿದ್ದಾರೆ.

ಚಿಕ್ಕಮಂಗಳೂರು

ಕರ್ನಾಟಕ ಪ್ರಾಂತ ಪ್ಲಾಂಟೇಶನ್ ವರ್ಕರ್ಸ್ ಯೂನಿಯನ್‌ನ ಕಾರ್ಯಕಾರೀ ಸಮಿತಿ ಸಭೆ ಜೂನ್ 11 ರ ರೈತರ ಚಳುವಳಿಗೆ ಬೆಂಬಲ ನೀಡಿ ಪಿಕೇಟಿಂಗ್‌ನಲ್ಲಿ ಭಾಗವಹಿಸಬೇಕೆಂದು ನಿರ್ಧರಿಸಿದ್ದಾರೆ.

ಎಸ್. ಎಫ್. ಐ. ಜೂನ್ 11 ರಂದು ನಡೆಯಲಿರುವ ರೈತ - ಕಾರ್ಮಿಕರ ಹೋರಾಟಕ್ಕೆ ರಾಜ್ಯ ಎಸ್. ಎಫ್. ಐ. ಬೆಂಬಲ ನೀಡಿದೆ.

ಧಾರವಾಡದಲ್ಲಿ ಮತ ಪ್ರದರ್ಶನ

ಸ್ಥಳೀಯ ಅಭ್ಯರ್ಥಿಗಳನ್ನು ಕಾಯಂ ಮಾಡದೆ, ಸರಕಾರಿ ಶಾಖೆಗಳಲ್ಲಿ ಖಾಲಿಯಿರುವ ಜಾಗಗಳನ್ನು ತುಂಬುವ ಸಲುವಾಗಿ ಕೆ. ಪಿ. ಎಸ್. ಸಿ. ಪರೀಕ್ಷೆ ನಡೆಸುತ್ತಿರುವುದನ್ನು ಡಿ. ವೈ. ಎಫ್. ಐ. ನ ಧಾರವಾಡ ಘಟಕ ಸ್ಥಳೀಯ ಅಭ್ಯರ್ಥಿಗಳ ಸಂಘದ ಜೊತೆಯಲ್ಲಿ ಮೇ 27 ರಂದು ಪರೀಕ್ಷೆ ನಡೆಯುವ ಸ್ಥಳದಲ್ಲಿ ಪ್ರತಿಭಟನೆ ನಡೆಸಿತು. ಜಿ. ಎನ್. ದೇಶಪಾಂಡೆ, ಕೆ. ಬಿ. ಕಟ್ಟಿ, ಪಿ. ಚಂದ್ರಹಾಸ ಮತ್ತು ಶ್ರೀಮತಿ ಕೊಣ್ಣೂರ ಅವರು ಸಭೆಯಲ್ಲಿ ಭಾಷಣ ಮಾಡುತ್ತ ಸ್ಥಳೀಯ ಅಭ್ಯರ್ಥಿಗಳನ್ನು ಕಾಯಂ ಮಾಡಬೇಕೆಂದು ಒತ್ತಾಯಿಸಿದರು.

ಧಾರವಾಡದಲ್ಲಿ ನಡೆದ ಈ ಮತ ಪ್ರದರ್ಶನ ಸೂಕ್ತವಾಗಿದೆ. ಯುವ ಜನತೆ ಈ ಸಮಸ್ಯೆ ಪರಿಹಾರಕ್ಕಾಗಿ ಹೋರಾಟ ಮುಂದುವರಿಸಬೇಕಾದ್ದು ಅಗತ್ಯ.

ಪ್ಲೈವುಡ್ ಫ್ಯಾಕ್ಟರಿಯಲ್ಲಿ ಕಾರ್ಮಿಕನ ಸಾವು

ಏಪ್ರಿಲ್ 29 ರಂದು ಧಾರವಾಡ ಪ್ಲೈವುಡ್ ಫ್ಯಾಕ್ಟರಿಯಲ್ಲಿ ರಿಪ್ಸಾ ಮಶಿನನ್ನು ನಡೆಸುವ ಕಾರ್ಮಿಕ, ಶಿವಪುತ್ರಪ್ಪ ಮೂಕಣ್ಣವರ ನಿಧನರಾದರು.

ಪ್ಲೈವುಡ್ ಫ್ಯಾಕ್ಟರಿಯಲ್ಲಿ ಈಗ ನಡೆಸುತ್ತಿರುವ ಯಂತ್ರಗಳು ಅನೇಕ ವರ್ಷಗಳ ಹಳೆಯ ಯಂತ್ರಗಳಿದ್ದು, ಸುಮಾರು ಕಳೆದ 2 ವರ್ಷ 6 ತಿಂಗಳ ಹಿಂದೆ ಇದೇ ಯಂತ್ರದ ಮೇಲೆ ಕಾರ್ಮಿಕ, ಬಸಪ್ಪ ಸೋಗಿಮನಿ ಇವರು ನಿಧನರಾಗಿದ್ದನ್ನು ಇಲ್ಲಿ ಸ್ಮರಿಸಬಹುದು. ಆದರೆ ಮಾಲಿಕ ವರ್ಗ ಯಾವುದೇ ಉತ್ತಮ ಮತ್ತು ಸುರಕ್ಷಿತ ಯಂತ್ರಗಳನ್ನು ಅಳವಡಿಸುವಲ್ಲಿ ವಿಫಲವಾಗಿರುವುದನ್ನು ಇಲ್ಲಿ ಕಾಣಬಹುದು.

ಸಿ. ಐ. ಟಿ. ಯು. ಧಾರವಾಡ ಘಟಕ ಮೃತನಾದ ಕಾರ್ಮಿಕನಿಗೆ ಸಂತಾಪ ಸೂಚಿಸುತ್ತದೆ.

ಸಿರಸಿ ನಗರದಲ್ಲಿ ಅವ್ಯವಸ್ಥೆ

ಸಿರಸಿ ನಗರದಲ್ಲಿ ಬಡಜನರು ಕಳೆದ ಇಪ್ಪತ್ತು ವರ್ಷಗಳಿಂದ ಸರಕಾರಿ ಜಾಗದಲ್ಲಿ ಅತಿಕ್ರಮಣಮಾಡಿಕೊಂಡು ವಾಸಿಸುತ್ತಿದ್ದಾರೆ. ಆದರೆ ಈವರೆಗೂ ಇಲ್ಲಿಯ ಅಧಿಕಾರಿಗಳು ಕ್ರಮಗತವಾಗಿ ಮನೆ ಇಲ್ಲವವರಿಗೆ ಮನೆ, ಜಾಗವನ್ನು ಅವರ ಹೆಸರಿಗೆ ಪಟ್ಟಾ ಮಾಡಿಕೊಟ್ಟಿರುವದಿಲ್ಲ. ಆದರೆ ಕೆಲವೇ ಹಿತಾಸಕ್ತಿಗಳಿಗೆ ಮಾತ್ರ ಪಟ್ಟಾ ಮಾಡಿಕೊಟ್ಟಿರುವುದು ಕಂಡುಬರುತ್ತಿದೆ ಪಟ್ಟಾ ಆಗದೇ ಇದ್ದ ಅತಿಕ್ರಮಣದಾರರಿಗೆ ಅವರ ಹೆಸರಿಗೆ ಪಟ್ಟಾ ಕೊಡಬೇಕು

ಸಿರಸಿ ನಗರದಲ್ಲಿ ಪುರಸಭೆಯ ಚುನಾವಣೆಯಾಗಿ 5 ತಿಂಗಳಾದರೂ ನೀರಿನ ಸಮಸ್ಯೆ ಬಗೆ ಹರಿಯದೇ ಮೊದಲಿದ್ದ ರೀತಿಯಲ್ಲೇ ಮುಂದುವರೆದಿರುತ್ತದೆ. ಆದ ಕಾರಣ ಇನ್ನು ಮೇಲಾದರೂ ಪ್ರತಿದಿನ ಎರಡು ಹೊತ್ತು ನೀರು ಪೂರೈಸುವ ವ್ಯವಸ್ಥೆಯಾಗಬೇಕು. ಮತ್ತು ಕೆಲವು ಕಡೆಯಲ್ಲಿ ನೀರು ಬಾರದಿದ್ದ ಕಾರಣ ನಗರ ಸಭೆಯವರು 1. ಭೀಮನ ಗುಡ್ಡ 2. ರಾಮನಬೈಲು ಮತ್ತು ಮರಾಠೆ ಕೊಪ್ಪದಲ್ಲಿ ಮೂರು ಟ್ಯಾಂಕ್ ಕಟ್ಟಿಸಿ ಸಿರಸಿ ನಗರದ ಪ್ರತಿಯೊಂದು ಕಡೆಗೂ ಮೂರು ತಿಂಗಳೊಳಗಾಗಿ ನೀರು ಪೂರೈಸುವಂತೆ ವ್ಯವಸ್ಥೆಯಾಗಬೇಕು. ನೀರಿನ ಶಾಶ್ವತ ಪರಿಹಾರ ಯೋಜನೆಯಾಗುವವರೆಗೆ ತಾತ್ಕಾಲಿಕವಾಗಿ ಎಲ್ಲ ವಾರ್ಡುಗಳ ಜನರಿಗೆ ಟೆಂಕರ ಮೂಲಕ ಕುಡಿಯುವ ನೀರಿನ ಪೂರೈಕೆ ಬಗ್ಗೆ ಕೂಡಲೇ ವ್ಯವಸ್ಥೆಯಾಗಬೇಕು.

ದಾಸ್ತಾನವುಳ, ಕಸಕಟ್ಟೆ, ಗಟಾರ ಸ್ವಚ್ಛತೆಯನ್ನು ವಿಶೇಷ ವಾಹನಗಳನ್ನು ಬಾಡಿಗೆಗೆ ಹಿಡಿದು ಪ್ರತಿ ತಿಂಗಳಿಗೊಮ್ಮೆಯಾದರೂ ವಾರ್ಡ್‌ಗಳನ್ನು ಕ್ಲೀನಾಗಿ ಇಡಬೇಕು.

ಸದ್ಯದ ಬಸ್ ಸ್ಟ್ಯಾಂಡಿನ ಸ್ಥಳಾಂತರ ಬಗ್ಗೆ ವಿವಾದವಿದ್ದು ಅದು ಈಗ ಇದ್ದಲ್ಲಿಯೇ ಇರುವದು ಸಮಂಜಸವೆಂಬುದು ನಗರದ ಸಾಮಾನ್ಯ ಜನರ ಅಭಿಪ್ರಾಯವಿದೆ. ಆದರೆ ಈ ಬಗ್ಗೆ ಪುರಸಭೆಯವರು ಬಸ್ ಸ್ಟ್ಯಾಂಡಿನಲ್ಲಿ ಸ್ವಚ್ಛಂದವಾಗಿ ಓಡಾಟ ನಡೆಯುವಂತೆ ವ್ಯವಸ್ಥೆ ಮಾಡಿಕೊಡಬೇಕಾಗಿದೆ. ಮೊದಲಿನ ಹಂತವೆಂದು ಈಗಿದ್ದ ಮೀನುಪೇಟೆಯನ್ನು ನಗರದ ಬೇರೆಕಡೆಯಲ್ಲಿ ರಾಮನಬೈಲು, ನೀಲೇಕಣಿ, ಮರಾಠಕೊಪ್ಪಗಳಲ್ಲಿ ಹಂಚಹಾಕಬೇಕು ಎಂದು ಪಿ. ಜಿ. ಮಶಾಲ್ದಿ ಕಾರ್ಯದರ್ಶಿ ಸಿಪಿಐ (ಎಂ) ಸಿರಸಿ ಶಾಖೆಯವರು ಒತ್ತಾಯ ಪಡಿಸಿದ್ದಾರೆ.

ಬಳ್ಳಾರಿ ಕಾಲೇಜ್ ಹಗರಣ

ಬಳ್ಳಾರಿಯ ವೀರಶೈವ ಕಾಲೇಜಿನಲ್ಲಿ ನಡೆದ ಹಣ ದುರುಪಯೋಗ ಮತ್ತು ಅಧಿಕಾರ ದುರುಪಯೋಗದ ಬಗ್ಗೆ ಕ್ರಮ ಕೈಗೊಳ್ಳಲು ಎಸ್. ಎಫ್. ಐ. 1982 ನೇ ಸೆಪ್ಟಂಬರ್‌ನಲ್ಲಿ ಮಾಡಿದ ಹೋರಾಟಕ್ಕೆ ಎರಡು ವರ್ಷಗಳ ಬಳಿಕ ಫಲಿತಾಂಶ ದೊರೆತಿದೆ. ತನಿಖೆ ವಿಳಂಬವಾದುದು ಅಸಮಾಧಾನಕರವಾ

[8ನೇ ಪುಟ ನೋಡಿ]

ಎಸ್. ಎಫ್. ಐ. ಸುದ್ದಿಗಳು

ಶಾಲಾ-ಕಾಲೇಜು ಚುನಾವಣೆಯಲ್ಲಿ ಸ್ಪರ್ಧಿಸಲು

ಎಸ್. ಎಫ್. ಐ. ನಿರ್ಧಾರ

ಭಾರತ ವಿದ್ಯಾರ್ಥಿ ಫೆಡರೇಶನ್ (ಎಸ್. ಎಫ್. ಐ.) ದಕ್ಷಿಣ ಕನ್ನಡ ಜಿಲ್ಲಾ ಸಮಿತಿಯು ಮೇ 20, 21 ರಂದು ಮಂಗಳೂರಿನಲ್ಲಿ ಸಭೆ ಸೇರಿತು. ಜಿಲ್ಲೆಯಾದ್ಯಂತ ಈ ಶೈಕ್ಷಣಿಕ ವರ್ಷ ಶಾಲಾ, ಕಾಲೇಜು ವಿದ್ಯಾರ್ಥಿ ಸಂಘಗಳಿಗೆ ನಡೆಯಲಿರುವ ಚುನಾವಣೆಯಲ್ಲಿ ಎಸ್. ಎಫ್. ಐ. ತನ್ನ ಅಭ್ಯರ್ಥಿಗಳನ್ನು ನಿಲ್ಲಿಸಲು ನಿರ್ಧರಿಸಿದೆ. ಜಾತಿವಾದಿ ಗೂಂಡಾಗಿರಿಯ ಭಯದ ವಾತಾವರಣದಲ್ಲಿ ನಡೆಯುತ್ತಿರುವ ವಿದ್ಯಾರ್ಥಿ ಸಂಘಗಳ ಚುನಾವಣೆಗೆ ಬದಲಿಯಾಗಿ "ಪ್ರಜಾಪ್ರಭುತ್ವ" ವಾತವರಣ ನಿರ್ಮಿಸಿ, ಹೋರಾಡುವಲ್ಲಿ "ವಿದ್ಯಾರ್ಥಿ ಜನತಾ" ಸಂಘಟನೆಯೊಂದಿಗೆ ಸೇರಿ ಐಕ್ಯರಂಗ ರಚಿಸಲು ಎಸ್. ಎಫ್. ಐ. ನಿರ್ಧರಿಸಿದೆ.

ಬೆಳ್ತಂಗಡಿಯ ಸರಕಾರಿ ಜೂನಿಯರ್ ಕಾಲೇಜಿನಲ್ಲಿ ಪ್ರಥಮ ಪಿ.ಯು.ಸಿ. ಪರೀಕ್ಷೆಯಲ್ಲಿ 7 ವಿದ್ಯಾರ್ಥಿಗಳನ್ನು ಉದ್ದೇಶಪೂರ್ವಕವಾಗಿ ಅನುತ್ತೀರ್ಣಗೊಳಿಸಿರುವ ವಿಚಾರದ ಬಗ್ಗೆ ಚರ್ಚಿಸಿದ ಸಮಿತಿಯು ಈ ಬಗ್ಗೆ ಪಿ. ಯು. ಸಿ. ಮಂಡಳಿಯು ಸೂಕ್ತ ತನಿಖೆಯನ್ನು ನಡೆಸಬೇಕೆಂದು ಒತ್ತಾಯಿಸಿದೆ. ಈ ಬಗ್ಗೆ ಸೂಕ್ತ ತನಿಖೆ ನಡೆಸುವುದಾಗಿ ಈಗಾಗಲೇ ಪಿ. ಯು. ಸಿ. ಮಂಡಳಿ ಅಧ್ಯಕ್ಷರಾದ ನಂಜುಂಡಪ್ಪರವರು ಎಸ್. ಎಫ್. ಐ. ರಾಜ್ಯ ಸಮಿತಿಗೆ ಭರವಸೆ ನೀಡಿದ್ದು, ಕೂಡಲೇ ಕ್ರಮ ಕೈಗೊಳ್ಳದಿದ್ದಲ್ಲಿ ತೀವ್ರ ಹೋರಾಟ ನಡೆಸುವ ಎಚ್ಚರಿಕೆ ನೀಡಿದೆ. ಜಿಲ್ಲೆಯಾದ್ಯಂತ ಹಾಸ್ಟೆಲ್ ಭ್ರಷ್ಟಾಚಾರಗಳ ವಿರುದ್ಧ ಹೋರಾಟ ನಡೆಸಲು ನಿರ್ಧರಿಸಲಾಗಿದೆ.

ಕರ್ನಾಟಕ ರಾಜ್ಯ ಎಸ್. ಎಫ್. ಐ. ಅಧ್ಯಕ್ಷರಾದ ಆರ್. ಜಯಕುಮಾರ್, ಉಪಾಧ್ಯಕ್ಷರಾದ ಗುರುಶಾಂತಪ್ಪನವರು ಸಭೆಯಲ್ಲಿ ಭಾಗವಹಿಸಿ ಮಾರ್ಗದರ್ಶನ ಮಾಡಿದರು. ಜಿಲ್ಲಾ ಸಮಿತಿ ಅಧ್ಯಕ್ಷರಾದ ಕೆ. ವಿಶ್ವನಾಥ್ ಅಧ್ಯಕ್ಷತೆ ವಹಿಸಿದ್ದರು.

ಬೆಳ್ತಂಗಡಿಯಲ್ಲಿ

ಎಸ್. ಎಫ್. ಐ. ಅಧ್ಯಯನ ಶಿಬಿರ

ಮೇ 22 ರಂದು ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲೂಕು ಭಾರತ ವಿದ್ಯಾರ್ಥಿ ಫೆಡರೇಶನ್ [ಎಸ್.ಎಫ್.ಐ.] ಸಂಘಟನಾ ಸಮಿತಿಯ ನೇತೃತ್ವದಲ್ಲಿ ಅಧ್ಯಯನ ತರಗತಿಯು ನಡೆಯಿತು ಎಸ್. ಎಫ್. ಐ. ದ. ಕ. ಜಿಲ್ಲಾ ಸಮಿತಿಯ ಅಧ್ಯಕ್ಷ ಕಾ|| ಕೆ. ವಿಶ್ವನಾಥ್ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಕಲಾಪಗಳನ್ನು ನಡೆಸಿದರು.

ಎಸ್. ಎಫ್. ಐ. ಕರ್ನಾಟಕ ರಾಜ್ಯಸಮಿತಿ ಅಧ್ಯಕ್ಷ ಕಾ| ಆರ್. ಜಯಕುಮಾರ್ ಇವರು ಎಸ್.ಎಫ್.ಐ. ಹುಟ್ಟು ಹಾಗೂ ಬೆಳವಣಿಗೆ ಮತ್ತು ಎಸ್. ಎಫ್. ಐ ಧ್ಯೇಯೋದ್ದೇಶ, ಕಾರ್ಯಕ್ರಮಗಳ ಬಗ್ಗೆ ಉಪನ್ಯಾಸ ನೀಡಿದರು.

ಎಸ್. ಎಫ್. ಐ. ರಾಜ್ಯ ಸಮಿತಿ ಉಪಾಧ್ಯಕ್ಷ ಕಾ| ಎಸ್. ವೈ. ಗುರುಶಾಂತ "ಭಾರತದ ಸ್ವಾತಂತ್ರ್ಯ ಚಳವಳಿಯಲ್ಲಿ ವಿದ್ಯಾರ್ಥಿಗಳ ಪಾತ್ರ" ಮತ್ತು "ದೇಶದ ಇಂದಿನ ಸ್ಥಿತಿಗತಿ" ವಿಷಯಗಳ ಕುರಿತು ಉಪನ್ಯಾಸ ನೀಡಿದರು.

ಕಾರ್ಯಕ್ರಮದ ಆರಂಭದಲ್ಲಿ ಎಸ್. ಎಫ್. ಐ. ಸಂಘಟನಾ ಸಮಿತಿ ಸಂಚಾಲಕ ಕೆ. ಪುರಂದರ ಸ್ವಾಗತಿಸಿದರು. ಕೆ. ಸೋಮನಾಥ ವಂದಿಸಿದರು.

ಎಸ್. ಎಫ್. ಐ. ನಿಂದ ಸತ್ಯಾಗ್ರಹ

ಬೆಳ್ತಂಗಡಿ ಕಿರಿಯ ಕಾಲೇಜಿನ ಪ್ರಥಮ ಪಿಯುಸಿ ಅನುತ್ತೀರ್ಣರಾದ ವಿದ್ಯಾರ್ಥಿಗಳು ತಮ್ಮ ಉತ್ತರ ಪತ್ರಿಕೆಗಳ ಪುನರ್ ಮೌಲ್ಯಮಾಪನವನ್ನು ಒತ್ತಾಯಿಸಿ ಜೂನ್ 1ನೇ ತಾರೀಕಿನಿಂದ ಸರದಿ ಉಪವಾಸ ಸತ್ಯಾಗ್ರಹವನ್ನು ಪ್ರಾರಂಭಿಸಿದ್ದಾರೆ. ಉಪವಾಸ ಸತ್ಯಾಗ್ರಹವನ್ನು ಉದ್ಘಾಟಿಸಿದ ಎಸ್. ಡಿ. ಎಂ. ಕಾಲೇಜು ಉಜಿರೆಯ ಕಲಾ ಸಂಘದ ಕಾರ್ಯದರ್ಶಿ ಪ್ರಶಾಂತ ಆರ್ ಬಾಳಿಗ ಮಾತನಾಡುತ್ತಾ, ವಿದ್ಯಾರ್ಥಿಗಳು ಅನ್ಯಾಯದ ವಿರುದ್ಧ ಪ್ರತಿಭಟನೆ ಮಾಡಬೇಕಾದದ್ದು ಅವರ ಕರ್ತವ್ಯ ಎಂದು ನೆನಪಿಸಿ ಹೋರಾಟವು ಯಶಸ್ವಿಯಾಗಲಿ ಎಂದು ಹಾರೈಸಿದರು. ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಎಸ್.ಎಫ್.ಐ. ಜಿಲ್ಲಾ ಸಮಿತಿ ಕಾರ್ಯದರ್ಶಿ ಸುನಿಲ್ ನಟೇಕರ್ ಹೋರಾಟದ ಮೂಲಕ ವಿದ್ಯಾರ್ಥಿಗಳ ಬೇಡಿಕೆ ಈಡೇರಿಸಲು ಸಾಧ್ಯ ಎಂದು ಹೇಳುತ್ತಾ ನ್ಯಾಯ ಸಿಗುವವರೆಗೆ ಹೋರಾಟ ಎಂದೂ ನಿಲ್ಲದು ಎಂದು ಹೇಳಿದರು.

ಬೆಳ್ತಂಗಡಿ ಕಿರಿಯ ಕಾಲೇಜಿನ ಕೆಲವು ವಿದ್ಯಾರ್ಥಿಗಳನ್ನು ಉದ್ದೇಶಪೂರ್ವಕವಾಗಿ ಅನುತ್ತೀರ್ಣ ಮಾಡಿದ್ದಾರೆ. ಈ ಬಗ್ಗೆ ಎಸ್. ಎಫ್. ಐ. ರಾಜ್ಯ ಸಮಿತಿ ಮೂಲಕ ಪಿಯುಸಿ ಮಂಡಳಿ ನಿರ್ದೇಶಕರಾದ ನಂಜುಂಡಪ್ಪನವರಿಗೆ ಮನವಿ ನೀಡಲಾಗಿದ್ದರೂ ಈ ಬಗ್ಗೆ ಈವರೆಗೆ ಯಾವುದೇ ತನಿಖೆಯಾಗದಿದ್ದ ಕಾರಣ ವಿದ್ಯಾರ್ಥಿಗಳು ನ್ಯಾಯಕ್ಕಾಗಿ ಸತ್ಯಾಗ್ರಹದ ದಾರಿಯನ್ನು ಹಿಡಿದಿದ್ದಾರೆ. ಈ ಹೋರಾಟಕ್ಕೆ ಜಿಲ್ಲೆಯ ವಿದ್ಯಾರ್ಥಿ ಸಮುದಾಯದವರು ಸಂಪೂರ್ಣ ಬೆಂಬಲ ನೀಡಬೇಕೆಂದು ಕಾರ್ಯದರ್ಶಿಗಳು ಮನವಿ ಮಾಡಿದ್ದಾರೆ.

ಕಾಪಿ ಹೊಡೆದು ಡಿಬಾರ್ ಆದ ಎಬಿವಿಪಿ ನಾಯಕ

ಇತ್ತೀಚೆಗೆ ನಡೆದ ಕಾನೂನು ಪದವಿ ಪರೀಕ್ಷೆಯಲ್ಲಿ ಬಳ್ಳಾರಿ ಕಾಲೇಜೊಂದರಲ್ಲಿ ಕಾಪಿ ಹೊಡೆದು ವಿದ್ಯಾರ್ಥಿಯೊಬ್ಬ ಮೂರು ವರ್ಷ ಡಿಬಾರ್ ಆಗಿದಾನೆ. ಈ ವಿದ್ಯಾರ್ಥಿ ಯಾರು ಗೊತ್ತೇ ? ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ [ಎಬಿವಿಪಿ] ನ ಕರ್ನಾಟಕ ರಾಜ್ಯ ಸಮಿತಿ ಸಹ ಕಾರ್ಯದರ್ಶಿ ಹಾಗೂ ಕೇಂದ್ರ ಸಮಿತಿ ಸದಸ್ಯನಾಗಿರುವ ನಿರಂಜನ. ಈ ನಾಯಕ ಮಹಾಶಯನನ್ನ ಸಂಘಟನೆಯಿಂದ ಇನ್ನೂ ವಜಾ ಮಾಡಿಲ್ಲವೇಕೆ ? ಎಬಿವಿಪಿ ಕೂಡ ಕಾಪಿ ಹೊಡೆಯಲು ಬೆಂಬಲ ನೀಡುತ್ತದೆಯೇ ? ಪ. ಬಂಗಾಳದಲ್ಲಿ ಕಾಪಿ ಹೊಡೆಯುವುದು ತಮ್ಮ ಜನ್ಮಸಿದ್ಧ ಹಕ್ಕು ಎಂದು ಚಳುವಳಿ ಮಾಡಿದ ಕಾಂಗ್ರೆಸ ವಿದ್ಯಾರ್ಥಿ ಸಂಘಟನೆಯಾದ ಎನ್. ಎಸ್. ಯು. ಐ ಗೂ ಕಾಪಿ ಹೊಡೆಯಲು ಬೆಂಬಲ ನೀಡುತ್ತಿರುವ ಎ. ಬಿ. ವಿ. ಪಿ. ಗೂ ಏನು ವ್ಯತ್ಯಾಸ ? ಭಾಷಣಗಳಲ್ಲಿ ಕಾಪಿ ಹೊಡೆಯುವುದನ್ನು ತೀವ್ರವಾಗಿ ವಿರೋಧಿಸುತ್ತಿದ್ದ ಎ.ಬಿ.ವಿ.ಪಿ. ನಾಯಕರು ಇನ್ನು ಮುಂದೆ ಕಾಪಿ ಹೊಡೆಯಲು ಅವಕಾಶ ಕೊಡುಬೇಕೆಂದು ಜನತಾ ಸರ್ಕಾರವನ್ನು ಒತ್ತಾಯಿಸಬಹುದೆ ?

ಮಧ್ಯ ಪ್ರದೇಶದಲ್ಲಿ ಇಷ್ಟರಲ್ಲೇ ಎ. ಬಿ. ವಿ. ಪಿ. ಯ ಕೇಂದ್ರ ಸಮಿತಿ ಸಭೆ ನಡೆಯಲಿದ್ದು ಈ ಸಭೆಯಲ್ಲಿ ಕಾಪಿ ಹೊಡೆದು ಡಿಬಾರ್ ಆದ ನಾಯಕ ಮಹಾಶಯನಿಗೆ ಕಾಪಿ ಹೊಡೆದಿದ್ದಕ್ಕಾಗಿ ಸಂಘಟನೆಯಲ್ಲಿ ಪ್ರಮೋಷನ್ ಸಿಗಬಹುದೇ ? ಕಾದು ನೋಡಬೇಕು.

— ಎಂ. ವಿರೂಪಾಕ್ಷನಾಯಕ್
ಹೊಸಪೇಟೆ

ಸಿ. ಐ. ಟಿ. ಯು. ಸಮ್ಮೇಳನದ ನಿರ್ಣಯ

ಎಲ್ ಐ ಸಿ ನೌಕರರ ಹೋರಾಟಕ್ಕೆ ಬೆಂಬಲ

ಭಾರತದ ಜೀವವಿಮಾ ನಿಗಮ [ಎಲ್ ಐ ಸಿ] ವನ್ನು ಐದು ಪ್ರತ್ಯೇಕ ನಿಗಮಗಳನ್ನಾಗಿ ವಿಭಜಿಸುವ ಉದ್ದೇಶದಿಂದ ಕೇಂದ್ರ ಸರಕಾರವು ಪಾರ್ಲಿಮೆಂಟಿನಲ್ಲಿ ಮಂಡಿಸಿರುವ 1983ರ ಲೈಫ್ ಇನ್ಶೂರೆನ್ಸ್ ಕಾರ್ಪೋರೇಷನ್ಸ್ ಮಸೂದೆಯನ್ನು 1984 ರ ಮೇ 14 ರಿಂದ 17ರ ವರೆಗೆ ಮಂಗಳೂರಿನಲ್ಲಿ ಜರುಗಿದ ಸಿ.ಐ.ಟಿ.ಯು. ಕರ್ನಾಟಕ ರಾಜ್ಯ ಸಮ್ಮೇಳನವು ಬಲವಾಗಿ ವಿರೋಧಿಸುತ್ತದೆ. ಎಲ್ ಐಸಿಯ ಉದ್ದೇಶಿತ ವಿಭಜನೆಯು ದೇಶದ ಹಿತಾಸಕ್ತಿಯನ್ನಾಗಲಿ ಪಾಲಿಸಿದಾರರ ಹಿತಾಸಕ್ತಿಯನ್ನಾಗಲೀ ಉತ್ತಮ ಪಡಿಸಲಾರದೆಂದೂ ಎಲ್ ಐಸಿಯ ಕಾರ್ಮಿಕರ ಹಕ್ಕುಗಳ ಮತ್ತು ಸವಲತ್ತುಗಳ ಮೇಲೆ ದಾಳಿ ಮಾಡುವುದೇ ಈ ಮಸೂದೆಯ ಉದ್ದೇಶವೆಂಬುದೂ ಸ್ಪಷ್ಟವಾಗಿ ಗೋಚರಿಸುತ್ತದೆ.

ಕೈಗಾರಿಕಾ ಸಂಬಂಧಗಳ ಕಾನೂನು ಮತ್ತು ಇತರ ಕಾರ್ಮಿಕ ಕಲ್ಯಾಣ ಕಾನೂನುಗಳ ವ್ಯಾಪ್ತಿಯಿಂದ ಎಲ್ಐಸಿ ನೌಕರರನ್ನು ಪ್ರತ್ಯೇಕಿಸುವ ಮೂಲಕ ಕಾರ್ಮಿಕರು ಹಲವಾರು ದಶಕಗಳ ತ್ಯಾಗಬಲಿದಾನಗಳಿಂದ ಗಳಿಸಿದ ಹಕ್ಕುಗಳನ್ನು ಈ ಮಸೂದೆಯು ಕಿತ್ತುಕೊಳ್ಳಬಯಸುತ್ತದೆ. ಎಲ್ಐಸಿ ನೌಕರರ ರಾಜಕೀಯ ಮತ್ತು ಪ್ರಜಾಪ್ರಭುತ್ವ ಹಕ್ಕುಗಳ ಮೇಲೂ ಈ ಮಸೂದೆಯು ಧಾಳಿ ಮಾಡುತ್ತದೆ.

ಕಾರ್ಮಿಕರ ಸಂಘಟಿತ ಶಕ್ತಿಯನ್ನು ಮುರಿಯಲು ಮತ್ತು ಅವರ ಹಕ್ಕುಗಳನ್ನು ಕಸಿದು ಕೊಳ್ಳಲು ನಡೆಸುತ್ತಿರುವ ಪ್ರಯತ್ನಗಳು ಎಲ್ಐಸಿ ನೌಕರರಿಗೆ ಸೀಮಿತವಾಗಿ ಉಳಿಯಲಾರದೆಂದೂ ಈ ಧಾಳಿಯನ್ನು ಪ್ರಬಲವಾಗಿ ವಿರೋಧಿಸಿ ಸೋಲಿಸದಿದ್ದರೆ ಮುಂದೆ ಇತರ ಕಾರ್ಮಿಕರ ಮೇಲೆ ಕೂಡ ಇದೇ ರೀತಿಯ ಧಾಳಿಗಳು ಬರಬಹುದೆಂದೂ ಈ ಸಭೆಯು ಅಭಿಪ್ರಾಯಪಡುತ್ತದೆ. ಈ ಕಾರ್ಮಿಕ ವಿರೋಧಿ ಮತ್ತು ಜನವಿರೋಧಿ ಮಸೂದೆಯನ್ನು ಕೂಡಲೇ ಹಿಂತೆಗೆದು ಕೊಳ್ಳಬೇಕೆಂದು ಕೇಂದ್ರ ಸರ್ಕಾರವನ್ನು ಈ ಸಮ್ಮೇಳನವು ಒತ್ತಾಯಿಸುತ್ತದೆ ಮತ್ತು ಎಲ್ಲಾ ವಿಭಾಗಗಳ ಕಾರ್ಮಿಕರೂ ಈ ಮಸೂದೆಯನ್ನು ಪ್ರಬಲವಾಗಿ ವಿರೋಧಿಸಬೇಕೆಂದು ಈ ಸಮ್ಮೇಳನವು ಕರೆ ನೀಡುತ್ತದೆ'

ಕಳೆದ ಏಳು ವರ್ಷಗಳಿಂದಲೂ ನನೆಗುದಿಗೆ ಬಿದ್ದಿರುವ, ತಮ್ಮ ಬೇಡಿಕೆಗಳ ಈಡೇರಿಕೆಗಾಗಿಯೂ, ವೇತನ ಕಡಿತ, ತುಟ್ಟಿಭತ್ಯೆ ಕಡಿತ ಮತ್ತು ವೇತನ ಮಿತಿ ಹೇರುವುದರ ವಿರುದ್ಧವೂ ಜೀವವಿಮಾ ನೌಕರರು ಇದೇ ಜೂನ್ ತಿಂಗಳಲ್ಲಿ ಆರಂಭಿಸಲಿರುವ ಅನಿರ್ದಿಷ್ಟಾವಧಿಯ ಮುಷ್ಕರಕ್ಕೆ ಈ ಸಮ್ಮೇಳನವು ಸಂಪೂರ್ಣ ಬೆಂಬಲ ವ್ಯಕ್ತ ಪಡಿಸುತ್ತದೆ.

ಪಂಪಾಪತಿಯವರೇ ಗೂಂಡಾಗಿರಿ ನಿಲ್ಲಿಸಿ

ಭದ್ರಾ ಸಕ್ಕರೆ ಕಾರ್ಖಾನೆ ಕಾರ್ಮಿಕರ ಒತ್ತಾಯ

ದಾವಣಗೆರೆಯ ಹತ್ತಿರ ಇರುವ ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆಯ ಕಾರ್ಮಿಕರು ಕಳೆದ ಹಲವು ವರ್ಷಗಳಿಂದ ಎ. ಐ. ಟಿ. ಯು. ಸಿ. ಮುಖಂಡ ಶಾಸಕ ಕಾಂ. ಪಂಪಾಪತಿಯವರ ನೇತೃತ್ವದಲ್ಲಿ ಸಂಘ ನಡೆಸಿಕೊಂಡು ಬಂದಿದ್ದರು. ಅವರ ಕಾರ್ಯ ಪದ್ಧತಿಗೆ ಬೇಸತ್ತು ಕಾರ್ಮಿಕರು ಮೇ 25 ರಂದು ಕಾರ್ಖಾನೆಯ ಮುಂಭಾಗದಲ್ಲಿ ಸಭೆ ಸೇರಿ ಎ. ಐ.ಟಿ. ಯು. ಸಿ. ನಾಯಕರು ನಡೆಸುತ್ತಿರುವ ದಬ್ಬಾಳಿಕೆ – ಗೂಂಡಾಗಿರಿಯ ವಿರುದ್ಧ ತಮ್ಮ ಪ್ರತಿಭಟನೆ ವ್ಯಕ್ತಪಡಿಸಿದ್ದಾರೆ. ಈ ಸಭೆಗೆ ಸಿ. ಐ. ಟಿ. ಯು. ನಾಯಕರನ್ನು ಆಹ್ವಾನಿಸಲಾಗಿತ್ತು. ಕಾಂ. ವಿ.ಜೆ.ಕೆ. ನಾಯರ್, ಭೀಮಪ್ಪ ರೆಡ್ಡಿ, ಡಿ.ವಿ. ಜೋಶಿ, ಹರಿಹರ ಪಾಲಿ ಫೈಬರ್ ಕಾರ್ಮಿಕ ಸಂಘದ ಆನಂದರಾವ್, ಗ್ವಾಲಿಯರ್‌ರೇಯಾನ್ ಕಾರ್ಮಿಕ ಸಂಘದ ಶಿವನಂಜಪ್ಪ, ಮುಂತಾದವರು ಭಾಷಣ ಮಾಡಿ ಕಾರ್ಮಿಕ ಸಂಘಟನೆಗಳನ್ನು ಪ್ರಜಾಪ್ರಭುತ್ವ ರೀತಿಯಲ್ಲಿ ನಡೆಸಬೇಕಲ್ಲದೆ ಗೂಂಡಾಗಿರಿಯಿಂದಲ್ಲೆಂದು ಹೇಳಿದರು. ಸಭೆಯ ಅಧ್ಯಕ್ಷತೆಯನ್ನು ಕಾಂ. ಹಿರಿಮಠ್ ವಹಿಸಿದ್ದರು.

ದಿನಗೂಲಿ ನೌಕರರ ಮುಷ್ಕರ

ಅಕ್ರಮವಾಗಿ ಕೆಲಸದಿಂದ ತೆಗೆಯುತ್ತಿರುವುದರ ಬಗ್ಗೆ, ಸಂಬಳ ಸಾರಿಗೆಗಳನ್ನು ಹೆಚ್ಚಿಸುವ ವಿಷಯದಲ್ಲಿ ಲೋಕೋಪಯೋಗಿ, ನೀರಾವರಿ, ಪಿ. ಹೆಚ್. ಇ. ಇಲಾಖೆಗಳಲ್ಲಿ 2000 ದಿನಗೂಲಿ ನೌಕರರು ಮೇ 30 ರಂದು ಯಶಸ್ವಿಯಾಗಿ ಮುಷ್ಕರವನ್ನು ಮಾಡಿರುತ್ತಾರೆ. ಅನಂತರ ಬೇಡಿಕೆಗಳ ಮನವಿಯನ್ನು ಮುಖ್ಯ ಇಂಜಿನಿಯರ್‌ರವರಿಗೆ ಅರ್ಪಿಸಲಾಯಿತು. ಮುಖ್ಯ ಇಂಜಿನಿಯರ್‌ರವರು ನೌಕರರ ಬೇಡಿಕೆಗಳನ್ನು ಕೂಡಲೆ ಬಗೆ ಹರಿಸುವುದಾಗಿ ಭರವಸೆಯನ್ನು ಕೊಟ್ಟಿರುತ್ತಾರೆ. ಅನಂತರ ಸಭೆಯನ್ನುದ್ದೇಶಿಸಿ ಶ್ರೀಯುತ ಎಸ್. ಸೂರ್ಯನಾರಾಯಣರಾವ್ ಅಧ್ಯಕ್ಷರು ಮತ್ತು ಆರ್. ಶ್ರೀನಿವಾಸ್‌ರವರುಗಳು ಮಾತನಾಡಿ, ನೌಕರರ ಬೇಡಿಕೆಗಳನ್ನು ಕೂಡಲೆ ಬಗೆಹರಿಸದಿದ್ದರೆ ತೀವ್ರವಾದ ಹೋರಾಟ ಮಾಡಬೇಕಾಗುತ್ತದೆಂದು ಸರ್ಕಾರಕ್ಕೆ ಎಚ್ಚರಿಕೆಯನ್ನು ಕೊಟ್ಟಿರುತ್ತಾರೆ.

ಮಹಿಳೆಯರ ಆಸೆ ನಿರಾಶೆಗೊಳಿಸುವ ಮಸೂದೆ

ಪ್ರತಿ ದಿವಸ ನಮ್ಮ ದೇಶದಲ್ಲಿ ಮದುವೆ ಸಮಯದಲ್ಲಿ ಸಾಕಷ್ಟು ವರದಕ್ಷಿಣೆ ಕೊಡಲಿಲ್ಲೆಂಬ ಕಾರಣದಿಂದ ಸಾವಿರಾರು ತರುಣಿಯರನ್ನು ಕೊಲ್ಲುವ, ಸುಡುವ, ಹಿಂಸೆಗೊಳಿಸುವ, ಘಟನೆಗಳು ನಡೆಯುತ್ತಿವೆ. ಇಡೀ ಸಮಾಜಕ್ಕೆ ಅವಹೇಳನಕಾರಕವಾದ ಈ ಪದ್ಧತಿಯನ್ನು ತಡೆಹಿಡಿಯಲು ತರುಣಿಯರ ಮೇಲೆ ಹಿಂಸಾಚಾರ ನಡೆಸುವ ಅವರ ಹತ್ಯೆಗೆ ಕಾರಣೀಭೂತರಾಹವರ ಮೇಲೆ ಉಗ್ರಕ್ರಮ ಕೈಗೊಳ್ಳಬೇಕೆಂದು ದೇಶದ ಎಡ-ಪ್ರಜಾಪ್ರಭುತ್ವ ಶಕ್ತಿಗಳೂ, ಮಹಿಳೆ, ವಿದ್ಯಾರ್ಥಿ, ಯುವಜನ ಸಂಘಟನೆಗಳು, ವರದಕ್ಷಿಣೆ ಪ್ರತಿಬಂಧ ಕಾನೂನಿಗೆ ತಿದ್ದುಪಡಿ ಮಾಡುವಂತೆ ಒತ್ತಾಯ ಮಾಡುತ್ತ ಬಂದಿವೆ. ಜನರ ಒತ್ತಾಯಕ್ಕೆ ಮಣಿದು ಕೇಂದ್ರ ಸರಕಾರ ಈ ಕಾಯಿದೆಗೆ ಒಂದು ತಿದ್ದುಪಡಿ ಮಾಡಿದೆ. ಆದರೆ ಈ ತಿದ್ದುಪಡಿ ಅಸಮರ್ಪಕವಾಗಿದೆ. ಕಾನೂನು ಸಲಹಾ ಕಮಿಟಿ, ವರದಕ್ಷಿಣೆ ಕಮಿಷನ್, ಜಂಟೀ ಸೆಲೆಕ್ಟ್ ಕಮಿಟಿಗಳ ಶಿಫಾರಸುಗಳನ್ನೆಲ್ಲ ಬದಿಗೊತ್ತಿ, ನಿರುಪಯುಕ್ತ ತಿದ್ದುಪಡಿಯನ್ನು ಮೊನ್ನೆಯ ಲೋಕಸಭೆಯಲ್ಲಿ ಮಂಡಿಸಲಾಯಿತು. ಉಲ್ಬಣಗೊಳ್ಳುತ್ತಿರುವ ವರದಕ್ಷಿಣೆ ಸಮಸ್ಯೆ ಈ ತಿದ್ದುಪಡಿಯಿಂದ ಬಗೆ ಹರಿಯಲು ಸಾಧ್ಯವಿಲ್ಲ. ಯಾವ ರೀತಿಯಲ್ಲಿ ವರದಕ್ಷಿಣೆಯನ್ನು ಕೊಡಲಾಗುತ್ತಿದೆ, ಅವುಗಳನ್ನು ಗುರುತಿಸಿ ತಪ್ಪಿತಸ್ಥರ ಮೇಲೆ ಕಠಿಣ, ಕ್ರಮ ಕೈಗೊಳ್ಳುವ ಅಧಿಕಾರ ರಾಜ್ಯ ಸರಕಾರಗಳಿಗೆ ಕೊಟ್ಟಿಲ್ಲ.

ಮದುವೆಗಳನ್ನು ನೊಂದಾಯಿಸುವ ಎಲ್ಲ ಜಾತಿಯ ಮಹಿಳೆಯರಿಗೆ ಸಮಾನ ಆಸ್ತಿಯ ಹಕ್ಕನ್ನು ಕೊಡುವ, ಮಹಿಳಾ ಆಯೋಗ ನೇಮಿಸುವ, ಮಹಿಳೆಯರಿಗೆ ಹೆಚ್ಚು ಉದ್ಯೋಗಾವಕಾಶ ಒದಗಿಸುವ ಸೂಚನೆಗಳನ್ನು ಜಂಟೀ ಪರಿಶೀಲನಾ ಸಮಿತಿ ಸೂಚಿಸಿದೆ. ತಿದ್ದುಪಡಿಯಲ್ಲಿ ಇವುಗಳನ್ನು ಅಳವಡಿಸಿಲ್ಲ. ಇದರಿಂದ ಮಹಿಳೆಯರಿಗೆ ದ್ರೋಹ ಮಾಡಿದಂತಾಗಿದೆ.

ಬಂಡವಾಳದಾರ, ದೊಡ್ಡ ಭೂಮಾಲೀಕರ, ಪಟ್ಟಭದ್ರ ಹಿತಾಸಕ್ತಿಗಳ ರಕ್ಷಣೆ ಮಾಡುವ ಕಾಂಗ್ರೆಸ್ ಸರಕಾರದಿಂದ ಮಹಿಳೆಯರ ಹಕ್ಕುಬಾಧ್ಯತೆಗಳೆಲ್ಲ ಸುರಕ್ಷಿತವಾಗಿರಲು ಸಾಧ್ಯವಿಲ್ಲ.

ಆದ್ದರಿಂದ ಮಹಿಳಾ ಮತ್ತಿನ್ನಿತರ ಎಡ ಮತ್ತು ಪ್ರಜಾಪ್ರಭುತ್ವ ಸಂಘಗಳು ಬಲವಾದ ಚಳುವಳಿ ಮೂಲಕ ಕೇಂದ್ರ ಸರಕಾರದ ಮೇಲೆ ಒತ್ತಡ ತರುವುದು ಅತ್ಯಗತ್ಯ. ಮಹಿಳೆಯರ, ವಿಚಾರವಂತರೇ ಎದ್ದೇಳಿ, ಮಹಿಳೆಯರ ರಕ್ಷಣೆಗೆ, ವರದಕ್ಷಿಣೆ ಪದ್ಧತಿಯ ನಿರ್ನಾಮಕ್ಕೆ ಮುಂದಾಗಿರಿ.

ಎ. ಕೆ. ಜಿ. ಭವನಕ್ಕೆ ರೂ. 20 ಲಕ್ಷ ದೇಣಿಗೆ

ಸಿ. ಪಿ ಐ. (ಎಂ) ಕೇಂದ್ರ ಸಮಿತಿ ದಿಲ್ಲಿಯಲ್ಲಿ ರಚಿಸಲಿರುವ ಎ. ಕೆ. ಗೋಪಾಲನ್ ಭವನಕ್ಕೆ ಕೆನಡದ ಸಂಗಾತಿಗಳು 65,000 ಕೆನಡಾದ ಡಾಲರ್ ಶೇಖರಿಸಿದ್ದಾರೆ. ಇನ್ನೂ ಹೆಚ್ಚಿಗೆ ಹಣ ಕೂಡಿಸುವುದಾಗಿ ಆಶ್ವಾಸನೆ ನೀಡಿದ್ದಾರೆ. ಇಂಗ್ಲೆಂಡಿನ ಸಂಗಾತಿಗಳು 75,000 ಪೌಂಡ್ ಈಗಾಗಲೇ ಕೂಡಿಸಿದ್ದು ಇನ್ನೂ 25,000 ಪೌಂಡ್ ಸೇರಿಸಿ, ಒಂದು ಲಕ್ಷದ ಗುರಿ ಪೂರೈಸುವುದಾಗಿ ಆಶ್ವಾಸನೆ ನೀಡಿದ್ದಾರೆ, ಶಾಖೆಗಳ, ಪಾರ್ಟಿ ಸದಸ್ಯರ ಸಭೆಕರೆದು ಒಂದು ತಿಂಗಳ ವೇತನವನ್ನು ಎ. ಜಿ. ಕೆ. ಭವನದ ನಿಧಿಗೆ ಕೊಡಬೇಕೆಂದು ಕೇಳಿಕೊಂಡಾಗ ಎಲ್ಲರೂ ಉತ್ಸಾಹದಿಂದ ಆ ಸೂಚನೆಯನ್ನು ಒಪ್ಪಿಕೊಂಡಿದ್ದಾರೆ.

ಕೇಂದ್ರ ಸಮಿತಿ ಪರವಾಗಿ ಹರಕಿಶನ್‌ಸಿಂಗ್ ಸೂರಜಿತ್ ಅವರು ಈ ಎರಡು ದೇಶಗಳಲ್ಲಿ ಕಳೆದ ಒಂದು ತಿಂಗಳು ಸಂಚಾರಮಾಡಿ ಅಲ್ಲಿ ನೆಲೆಸಿರುವ ಪಂಜಾಬಿ ಮತ್ತಿನ್ನಿತರ ಭಾರತೀಯರನ್ನು ಭೇಟಿಯಾಗಿ ಎ. ಕೆ ಗೋಪಾಲನ್ ಭವನಕ್ಕೆ ಹಣ ಸಂಗ್ರಹಿಸಿದಷ್ಟೇ ಅಲ್ಲ, ಬೇರೆ ಬೇರೆ ನಗರಗಳಲ್ಲಿ ಸಾರ್ವಜನಿಕ ಸಭೆ ಸೇರಿಸಿ, ಸಿಖ್ ಉಗ್ರಗಾಮಿಗಳ ವಿರುದ್ಧ ಜನಾಭಿಪ್ರಾಯ ಉಂಟು ಮಾಡಲು ಪ್ರಯತ್ನ ಮಾಡಿದ್ದಾರೆ. ಅದರಲ್ಲಿ ಯಶಸ್ವಿಯಾಗಿದ್ದಾರೆ.

ತುಮಕೂರು ಜಿಲ್ಲಾ ಸಮಗ್ರ ಅಭಿವೃದ್ಧಿ ನಿರ್ಮಾಣ ಹೋರಾಟ ಸಮಿತಿ

ದಿನಾಂಕ : 3-6-84 ರಂದು ಮೇಲ್ಕಂಡ ಸಮಿತಿಯು ತುಮಕೂರು ಪ್ರವಾಸಿ ಮಂದಿರದಲ್ಲಿ ಶ್ರೀ ಜಿ. ಎಸ್. ಪರಮಶಿವಯ್ಯ ನಿವೃತ್ತ ಸೂಪರಿಂಟೆಂಡೆಂಟ್ ಇಂಜಿನಿಯರ್ ಅವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತ್ತು. ಸಭೆಗೆ ಜಿಲ್ಲೆಯ ಹಲವಾರು ಭಾಗಗಳಿಂದ ಪ್ರಮುಖರು ಆಗಮಿಸಿದ್ದರು.

ಜಿಲ್ಲೆಗೆ ಹೇಮಾವತಿಯ ನೀರು ತರುವುದರಲ್ಲಿ ಸರ್ಕಾರವು ವಿಳಂಬ ಮಾಡುತ್ತಿರುವದರ ಬಗ್ಗೆ ತೀವ್ರವಾಗಿ ಚರ್ಚಿಸಿ ಕಳವಳ ವ್ಯಕ್ತ ಪಡಿಸಲಾಯಿತು. ತಮ್ಮ ಪ್ರದೇಶಗಳಿಗೆ ಅನುಕೂಲವಾಗುವಂತೆ ಆಸಕ್ತಿ ವಹಿಸಿರುವ ಕೆಲವು ಹಿತಾಸಕ್ತಿಗಳು ಸರ್ಕಾರದಲ್ಲಿದ್ದು ಸದಾ ಬರಗಾಲ ಪೀಡಿತ ಪ್ರದೇಶವಾದ ನಮ್ಮ ಜಿಲ್ಲೆಯ ಅಭಿವೃದ್ಧಿಗೆ ಕಂಟಕಪ್ರಾಯವಾಗಿರುವ ಶಕ್ತಿಗಳ ವಿರುದ್ಧ ಬಲವಾದ ಹೋರಾಟ ರೂಪಿಸದೆ ಈ ಯೋಜನೆಯು ಕಾರ್ಯಗತವಾಗಲಾರದೆಂದು ಅಭಿಪ್ರಾಯ ಪಡಲಾಯಿತು. ಹಾಗೂ ಈ ಹೋರಾಟವನ್ನು ರಾಜಕೀಯ ರಹಿತವಾಗಿ ಪಕ್ಷ ಪಂಗಡಗಳ ಭೇದವಿಲ್ಲದೆ ಕೇವಲ ಜಿಲ್ಲೆಯ ಹಿತಾಸಕ್ತಿಯನ್ನು ಗಮನದಲ್ಲಿಟ್ಟು ಹೋರಾಟವನ್ನು ರೂಪಿಸತಕ್ಕದೆಂದು ತೀರ್ಮಾನಿಸಲಾಯಿತು.

ಈ ಮೇಲ್ಕಂಡ ಯೋಜನೆಯಲ್ಲದೆ ತುಮಕೂರು ಜಿಲ್ಲೆಗೆ ನೀರಾವರಿ ಸೌಕರ್ಯವನ್ನು ಕಲ್ಪಿಸತಕ್ಕ ನೇತ್ರಾವತಿ ಯೋಜನೆ ಮತ್ತು ಅಪ್ಪರ್ ಭದ್ರಾ ಯೋಜನೆಗಳನ್ನು ಸರ್ಕಾರದವರು ತೀವ್ರವಾಗಿ ಮಂಜೂರಾತಿ ನೀಡುವಂತೆ ಒತ್ತಾಯಿಸಲೂ ಸಹ ಕಾರ್ಯಕ್ರಮವನ್ನೂ ರೂಪಿಸತಕ್ಕದೆಂದು ತೀರ್ಮಾನಿಸಲಾಯಿತು.

ಮೇಲ್ಕಂಡ ವಿಷಯದ ಬಗ್ಗೆ ವಿವರಗಳನ್ನೊಳಗೊಂಡ ಕರಪತ್ರಗಳನ್ನು ಮುದ್ರಿಸಿ ಅದಷ್ಟು ತೀವ್ರವಾಗಿ ವ್ಯಾಪಕವಾದ ಮತ್ತೊಂದು ಸಭೆಯನ್ನು ದಿನಾಂಕ 21-6-84 ಗುರುವಾರ ಬೆಳಗ್ಗೆ 11 ಗಂಟೆಗೆ ತುಮಕೂರಿನಲ್ಲಿ ಕರೆಯತಕ್ಕದೆಂದು ತೀರ್ಮಾನಿಸಲಾಯಿತು.

ಈ ಸಭೆಯಲ್ಲಿ 1984-85ರ ಸಾಲಿನ ಸಮಿತಿಯನ್ನು ಪ್ರತಿ ತಾಲ್ಲೂಕಿಗೂ ಪಾತಿನಿಧ್ಯ ಸಿಗುವಂತೆ ರಚಿಸಲಾಗುವುದು.

(1ನೇ ಪುಟದಿಂದ)

ಲಾಗಿದ್ದರೂ ಸಹ ಇದುವರೆಗೂ ಸೂಕ್ತ ಪರಿಹಾರ ನೀಡಿಲ್ಲ.

ಅದೇ ರೀತಿ ಮನೆ ಇಲ್ಲದ ನಿರ್ಗತಿಕ ಕಡುಬಡವರು ಅತಿಕ್ರಮಿಸಿ ಹತ್ತಾರು ವರ್ಷಗಳ ಹಿಂದೆಯೆ ಮನೆ ಕಟ್ಟಿಕೊಂಡಿದ್ದರೂ ಅವರಿಗೆ ಪಟ್ಟಾ ಸಿಕ್ಕಿಲ್ಲ. ತೀವ್ರ ವಸತಿ ಸಮಸ್ಯೆಗೆ ಪರಿಹಾರವನ್ನು ನೀಡಲು ಯೋಜನೆ ಹಾಕದಿರುವ ಜನತಾ ಸರಕಾರವು ಇತ್ತೀಚೆಗೆ ಅತಿಕ್ರಮಿಸಿ ಮನೆ ಕಟ್ಟುವವರಿಗೆ ಉಗ್ರಶಿಕ್ಷೆ ವಿಧಿಸುವಂತೆ ಕಾನೂನೊಂದನ್ನು ತರಲಿಚ್ಚಿಸಿದ್ದುದು ತೀರ ಆಶ್ಚರ್ಯಕರ. ಅಲ್ಲದೆ ಬಡ ಕೃಷಿ ಕೂಲಿಗಾರರಿಗೆ ಕನಿಷ್ಠಕೂಲಿ ಹೆಚ್ಚಿಸುವಂತೆ ಕ್ರಮ ವಹಿಸಲು ಕನಿಷ್ಠ ಕೂಲಿ ಶಿಫಾರಸು ಸಮಿತಿ ನೇಮಿಸಿದ್ದು, ಅದು ಈಗಾಗಲೇ ಶಿಫಾರಸು ನೀಡಿ ತಿಂಗಳುಗಟ್ಟಲೆಯಾದರೂ ಕನಿಷ್ಠಕೂಲಿ ಹೆಚ್ಚಿಸಿ ಘೋಷಿಸುವಲ್ಲಿ ಅತೀವವಿಳಂಬ ಅನುಸರಿಸಲಾಗುತ್ತಿದೆ.

ಕೇಂದ್ರದಲ್ಲಿ ಕಾಂಗ್ರೆಸ್ಸು ಭೂಸುಧಾರಣೆಯನ್ನು ಸಂಪೂರ್ಣವಾಗಿ ಕೈಬಿಟ್ಟಿರುವದಲ್ಲದೆ ಕಠಿಣ ಅರಣ್ಯ ಕಾನೂನನ್ನು ಜಾರಿಗೆ ತರಬೇಕೆನ್ನುತ್ತಿರುವ ಈ ಸಂದರ್ಭದಲ್ಲಿ ರಾಜ್ಯದಲ್ಲಿ ಜನತಾ ಸರಕಾರವು ಬದಲಿ ಧೋರಣೆಯನ್ನು ಅನುಸರಿಸುವ ಕ್ರಮವಾಗಿ ದರಖಾಸ್ತುದಾರರಿಗೆ, ವಸತಿ ರಹಿತರಿಗೆ ಪರಿಹಾರ ನೀಡುವಲ್ಲಿ ಮುಂದಾಗಿ ನಿಲ್ಲಬೇಕಾಗಿದೆ. ಅಂಥ ಯಾವ ಕ್ರಮಗಳನ್ನೂ ಜನತಾ ಸರಕಾರವು ಜಾರಿಗೆ ತರಲು ಸಾಧ್ಯವಾಗಿಲ್ಲದಾಗಿದೆ.

ದರಖಾಸ್ತುದಾರರಿಗೆ, ಬಗೈರ ಹುಕ್ಕುಂ ಸಾಗುವಳಿದಾರರಿಗೆ ವಸತಿ ರಹಿತರಿಗೆ ಪಟ್ಟಾ ನೀಡಬೇಕೆಂದು, ಕೃಷಿ ಕೂಲಿಕಾರರಿಗೆ ಕನಿಷ್ಠ ಕೂಲಿ ಘೋಷಿಸುವಂತೆ ತೀವ್ರವಾಗಿ ಒತ್ತಾಯಿಸಲು ರಾಜ್ಯದಾದ್ಯಂತ ಜೂನ 11, 1984 ರಂದು ಸರಕಾರಿ ಕಚೇರಿಗಳೆದುರು ಸಹಸ್ರ ಸಂಖ್ಯೆಯಲ್ಲಿ ಭೂಹೀನ ಬಡ ರೈತರು ಸಾಮೂಹಿಕವಾಗಿ ಪಿಕೆಟಿಂಗ್ ನಡೆಸುವದೆಂದು, ಕಚೇರಿ ಕೆಲಸ ಕಾರ್ಯಗಳನ್ನು ತಡೆಯುವದೆಂದು ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಸಮಿತಿಯು ತೀರ್ಮಾನಿಸಿದೆ. ಇದೇ ಸಂದರ್ಭದಲ್ಲಿ ರಾಜ್ಯ ಸಿಐಟಿಯು ಈ ಕಾರ್ಯಕ್ರಮಕ್ಕೆ ಬೆಂಬಲಾರ್ಥವಾಗಿ ಅಂದು ರಾಜ್ಯದಾದ್ಯಂತ ಕಾರ್ಮಿಕರು ಒಂದು ದಿನದ ಸಾರ್ವತ್ರಿಕ ಮುಷ್ಕರ ನಡೆಸುವುದಾಗಿ ತೀರ್ಮಾನಿಸಿದ್ದು ಇದು ರಾಜ್ಯದಲ್ಲಿ ರೈತ ಕಾರ್ಮಿಕರ ಐಕ್ಯ ಚಳವಳಿ ಕಟ್ಟುವಲ್ಲಿ ಇದೊಂದು ಚಾರಿತ್ರಿಕ ಹೆಜ್ಜೆಯಾಗಿದೆ. ಸರಕಾರದ ಮೇಲೆ ತೀವ್ರಪರಿಣಾಮವನ್ನುಂಟು ಮಾಡಬಹುದಾದ ಈ ಹೋರಾಟ ಕಾರ್ಯಕ್ರಮದಲ್ಲಿ ರಾಜ್ಯದಾದ್ಯಂತ ಬಡರೈತ-ಭೂಹೀನ ಕಾರ್ಮಿಕ ಬಂಧುಗಳು ಶಿಸ್ತಿನಿಂದ ಯಶಸ್ವಿಗೊಳಿಸಬೇಕೆಂದು ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ ವಿ. ಎನ್. ಹಳಕಟ್ಟಿ ವಿನಂತಿಸಿದ್ದಾರೆ.

ರೈತ ಚಳುವಳಿ ಯಶಸ್ವಿಯಾಗಲಿ

[ಒಂದನೇ ಪುಟದಿಂದ]

ರಾಜ್ಯದ ರೈತ-ಕಾರ್ಮಿಕರು ಪಿಕೆಟಿಂಗ್‌ನಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ಪ್ರಾಂತ ರೈತ ಸಂಘದ ಕಾರ್ಯದರ್ಶಿ ಪಿ. ಜಗನ್ನಾಥ್ ಮತ್ತು ಬೆಂಗಳೂರು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಲಕ್ಕಣ್ಣ ವಿನಂತಿಸಿದ್ದರೆ.

1. ಸರ್ಕಾರಿ ಭೂಮಿಯಲ್ಲಿ ಸಾಗುವಳಿ ಮಾಡಿರುವ ರೈತರಿಗೆ ಈ ಕೂಡಲೇ ಭೂಮಂಜೂರಾತಿಯ ಹಕ್ಕುಪತ್ರ ನೀಡಬೇಕು. ಶ್ರೀಮಂತರು ಅಕ್ರಮ ಸಾಗುವಳಿ ಮಾಡಿರುವ ಭೂಮಿಯನ್ನು ಬಿಡಿಸಿ ಬಡ ರೈತರಿಗೆ ಹಂಚಬೇಕು.

2. ಸರ್ಕಾರ ಘೋಷಣೆ ಮಾಡಿರುವ ಹಸಿರು ವಲಯ ಪ್ರದೇಶದಲ್ಲಿ ಬೇಸಾಯ ಮಾಡುತ್ತಿರುವ ರೈತರನ್ನು ಗುರುತಿಸಿ ಅವರಿಗೇ ಹಕ್ಕುಪತ್ರ ನೀಡಬೇಕು.

3. ಕೃಷಿ ಹಾಗೂ ಇನ್ನಿತರ ಇಪ್ಪತ್ತಾರು ಅಸಂಘಟಿತ ಉದ್ಯಮಗಳ ಕಾರ್ಮಿಕರ ಕನಿಷ್ಠ ಕೂಲಿ ಪ್ರಕಟಿಸಬೇಕು.

4 ಬರಗಾಲ ಪ್ರದೇಶಗಳಿಗೆ ಶಾಶ್ವತ ಪರಿಹಾರ ರೂಪಿಸಿ ನೀರಾವರಿ ಯೋಜನೆಗಳನ್ನು ಕಾರ್ಯರೂಪಕ್ಕೆ ತರಬೇಕು.

5. ರೈತರಿಗೆ ಮಾರುಕಟ್ಟೆಗಳಲ್ಲಿ ಆಗುವ ಅನ್ಯಾಯಗಳನ್ನು ತಡೆಗಟ್ಟಬೇಕು.

6. ಭೂ ಛಿದ್ರೀಕರಣ ಕಾಯ್ದೆಯನ್ನು (ಲ್ಯಾಂಡ್ ಫ್ರಾಗಮೆಂಟೇಷನ್ ಆಕ್ಟ್) ರದ್ದುಪಡಿಸಿ ದಕ್ಷಿಣ ಕನ್ನಡ ಉತ್ತರ ಕನ್ನಡ ಜಿಲ್ಲೆಯಲ್ಲಿರುವಂತೆ ಜಾರಿಗೆ ತರಬೇಕು.

7. ಸಾರ್ವಜನಿಕ ವಿತರಣಾ ಪದ್ಧತಿಯನ್ನು ಪಟ್ಟಣ ಹಳ್ಳಿ ಎಂದು ವಿಂಗಡಿಸದೆ ಗ್ರಾಮಾಂತರ ಪ್ರದೇಶಕ್ಕೂ ನಗರದಲ್ಲಿ ನೀಡುವ ರೀತಿಯಲ್ಲಿ ಪಡಿತರ ಪದ್ಧತಿ ಜಾರಿಗೆ ಬರಬೇಕು.

8. ಗೊಬ್ಬರ, ಇನ್ನಿತರ ಕ್ರಿಮಿನಾಶಕ ವಸ್ತುಗಳ ಮೇಲಿನ ಮಾರಾಟ ಕರ ರದ್ದಾಗಬೇಕು.

9. ಗ್ರಾಮಾಂತರ ಪ್ರದೇಶದಲ್ಲಿ ನಿವೇಶನರಹಿತರನ್ನು ಗುರುತಿಸಿ ನಿವೇಶನ ನೀಡಿ ಮನೆ ಕಟ್ಟಿಸಿಕೊಡಬೇಕು.

10. ಕೃಷಿ ಕಾರ್ಮಿಕರ, ಬಡ ರೈತರ ಸಾಲ ಮನ್ನಾ ಮಾಡಬೇಕು.

11. ರೈತರಿಗೆ ಅಧಿಕಾರಿಗಳ ಹಾಗೂ ಪೋಲೀಸರ ಕಿರುಕುಳ ತಪ್ಪಬೇಕು.

(6ನೇ ಪುಟದಿಂದ)

ಹರೂ ನ್ಯಾಯಯುತ ವರದಿ ನೀಡಿರುವುದನ್ನು ಎಸ್. ಎಫ್. ಐ. ಬಳ್ಳಾರಿ ನಗರ ಸಮಿತಿ ಸ್ವಾಗತಿಸಿದೆ.

ಆರೋಪ ಸಾಬೀತಾಗಿರಲ್ಪಟ್ಟಿರುವ ಭ್ರಷ್ಟ ಅಧಿಕಾರಿಗಳ ಮೇಲೆ ಕೂಡಲೇ ಶಿಸ್ತಿನ ಕ್ರಮ ತೆಗೆದುಕೊಳ್ಳಬೇಕೆಂದು ಕಾರ್ಯದರ್ಶಿ ಎಸ್. ಪ್ರಸನ್ನ ಕುಮಾರ್‌ರವರು ಮುಖ್ಯಮಂತ್ರಿಗಳ ಕಾರ್ಯಾಲಯಕ್ಕೆ ಪತ್ರದ ಮೂಲಕ ಒತ್ತಾಯಿಸಿದ್ದಾರೆ.

Printed & Publishedby P. Ramachandra Raoby him on behalf of the Communist Pary of India (Marxist) Karnataka State Committee, K. V. Temple Street, Sultanpet, Bangalore-560053. Editorial and managerial office, L-56, K. V. Temple Street, Sultanpet. B-53. Phone : 24154
Editor : P. Ramachandra Rao Managing Editor : N. K. Upadhyaya